ಕುಮಾರ್ ಈ ವೇಳೆ ಹಾಜರಿದ್ದರು.

Janathavani 20-07-2022

# ಬಿಐಇಟಿಯಲ್ಲಿ ಇಂದು ಇನ್-ಹೌಸ್ ಪ್ರಾಜೆಕ್ಟ್ ಪ್ರದರ್ಶನ

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ಇಂದು ಕೆಎಸ್‌ಸಿಎಸ್‌ಟಿ, ವಿಜಿಎಸ್‌ಟಿ, ವಿಟಿಯು ಇನ್‌ಸ್ಟಿಟ್ಯೂಟ್ ಮತ್ತಿತರೆ ಸಂಸ್ಥೆಗಳ ವತಿಯಿಂದ 'ಇನ್-ಹೌಸ್ ಪ್ರಾಜೆಕ್ಟ್ ವಸ್ತುಪ್ರದರ್ಶನವನ್ನು ಇಂದು ಮಧ್ಯಾಹ್ನ 12.15 ಕ್ಕೆ ಕಾಲೇಜಿನ ಎಸ್‌ಎಸ್‌ಎಂ ಕಲ್ಚರಲ್ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಸುನಿಲ್‌ರಾವ್ ಮತ್ತು ಪ್ರಶಾಂತ್ ಗುರುಪ್ರಸಾದ್ ಆಗಮಿಸುವರು ಎಂದು ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ತಿಳಿಸಿದ್ದಾರೆ.

Kannada Prabha 20-07-2022

# ಇಂದು ಬಿಐಇಟಿಯಲ್ಲಿ ಇನ್‌ಹೌಸ್ ಪ್ರಾಜೆಕ್ಟ್ ಎಕ್ಸಿಬಿಷನ್

**ದಾವಣಗೆರೆ:** ನಗರದ ಬಾಪೂಜಿ ಇಂಜಿನಿಯರಿಂಗ್ ತಾಂತ್ರಿಕ ಮಹಾವಿದ್ಯಾಲಯದಿಂದ ಇನ್ ಹೌಸ್ ಪ್ರಾಜೆಕ್ಟ್ ಎಕ್ಸಿಬಿಷನ್-2022 ಕಾರ್ಯಕ್ರಮವು ಜು.20ರ ಇಂದು ಮಧ್ಯಾಹ್ನ 12.15ಕ್ಕೆ ಕಾಲೇಜಿನ ಎಸ್.ಎಸ್.ಮಲ್ಲಿಕಾರ್ಜುನ ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಬೆಂಗಳೂರಿನ ಡಿಎಂಜಿ ಎಮ್‌ಓಆರ್‌ಐನ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಬೇಂದ್ರಪ್ಪ ಹಾಗೂ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಚ್.ಬಿ.ಅರವಿಂದ್ ಉಪಸ್ಥಿತರಿವರು.

# ಇಂದು ಬಿಐಇಟಿಯಲ್ಲಿ

Nagaravani 20-07-2022

# ಇನ್‌ಹೌಸ್ ಎಕ್ಸಿಬಿಷನ್

ದಾವಣಗೆರೆ,ಜು.19 : ನಗರದ ಬಾಪೂಜಿ ಇಂಜಿನಿಯರಿಂಗ್ ತಾಂತ್ರಿಕ ಮಹಾವಿದ್ಯಾಲಯದಿಂದ ಇನ್‌ಹೌಸ್ ಪ್ರಾಜೆಕ್ಟ್ ಎಕ್ಸಿಬಿಷನ್-2022 ಕಾರ್ಯಕ್ರಮವು ಜು.20ರ ಇಂದು ಮಧ್ಯಾಹ್ನ 12:15ಕ್ಕೆ ಕಾಲೇಜಿನ ಎಸ್. ಎಸ್. ಮಲ್ಲಿಕಾರ್ಜುನ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಡಿಎಂಜಿ ಎಮ್‌ಓಆರ್‌ಐನ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ರಾವ್ ಮತ್ತು ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಬೇಂದ್ರಪ್ಪ ಹಾಗೂ ಕಾಲೇಜಿನ ಪ್ರಾಂಶುಪಾಲ ಪ್ರೊ. ಹೆಚ್.ಬಿ. ಅರವಿಂದ್ ಉಪಸ್ಥಿತರಿವರು.

Janathavani 21-07-2022

# ಬಿಐಇಟಿ ವಿದ್ಯಾರ್ಥಿಗಳಿಂದ 64 ಬಗೆಯ ಸಂಶೋಧನೆಗಳು

ದಾವಣಗೆರೆ, ಜು.20- ನಗರದ ಬಿಐಇಟಿ ಕಾಲೇಜಿನ 10 ವಿಭಾಗಗಳ ವಿದ್ಯಾರ್ಥಿಗಳು 64 ರೀತಿಯ ಸಂಶೋಧನೆಗಳನ್ನು ಮಾಡಿದ್ದಾರೆ ಎಂದು ಪ್ರಾಂಶುಪಾಲ ಡಾ.ಅರವಿಂದ್ ಹೇಳಿದರು.

ವಿದ್ಯಾರ್ಥಿಗಳ ಸಂಶೋಧನಾ ಮಾದರಿ ಪ್ರದರ್ಶನಕ್ಕೂ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಮಾದರಿಗಳಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಹೆಚ್ಚು ಬರುವಂಥದ್ದು ಯಾವುದು ಎಂದು ಗುರುತಿಸಲಾಗುವುದು ಎಂದು ಹೇಳಿದರು.

ಈಗ ಸಂಶೋಧನೆಗಳಿಗೆ ಆರ್ಥಿಕ ಸಂಪನ್ಮೂಲಗಳ ಕೊರತೆ ಇಲ್ಲ. ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್, ವಿಟಿಯು, ಕೆಎಸ್‌ಸಿಎಸ್‌ಟಿ, ಎಐಸಿಟಿಇ, ಕೆಎಸ್‌ಟಿಎಗಳು ಸಂಶೋಧನೆಗಳಿಗೆ ಹಣ ಒದಗಿಸುತ್ತಿವೆ. ಈ ಸಂಸ್ಥೆಗಳು ಆಯ್ಕೆ ಮಾಡದ ಸಂಶೋಧನೆಗಳಿಗೆ ಬಿಐಇಟಿಯೇ ಹಣ ನೀಡುತ್ತದೆ ಎಂದರು.

ಬಿಐಇಟಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಹಾಗಾಗಿ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ವರ್ಷದಿಂದ ವರ್ಷಕ್ಕೆ ಇಲ್ಲಿನ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗುತ್ತಿದ್ದಾರೆ. 2020–21ರಲ್ಲಿ 357 ಮಂದಿ ಆಯ್ಕೆಯಾಗಿದ್ದರೆ, (3ನೇ ಪುಟಕ್ಕೆ)



# ಬಿಐಇಟಿ ವಿದ್ಯಾರ್ಥಿಗಳಿಂದ ಸಂಶೋಧನೆಗಳು

**(1ನೇ ಪುಟದಿಂದ)** 2021–22ರಲ್ಲಿ 648 ಮಂದಿ ಆಯ್ಕೆಯಾಗಿರುವುದು ಇದಕ್ಕೆ ಸಾಕ್ಷಿ ಎಂದು ವಿವರಿಸಿದರು. ಡಿಎಂಜಿ ಮೋರಿ ಇದರ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್, ಪಿಆರ್‌ಬಿ ದೇಸಾಯಿ ಅವರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

21-07-2022 samyuktha karnataka



### ■ ಬಿಐಇಟಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ಸಂಶೋಧನೆ

# ಸೊಳ್ಳೆ ಸಾಯಿಸಲು ಸಣ್ಣ ಯಂತ್ರ ಸಾಕು!

ದಾವಣಗೆರೆ: ಸೊಳ್ಳೆ ಸಾಯಿಸಲು ಯಾವುದೇ ಕಾಯಿಲ್, ಲಿಕ್ವಿಡ್‌ಗಳು ಬೇಕಿಲ್ಲ. ಬಿಸಿಗಾಳಿ ಹಾಯಿಸುವ ಮೂಲಕ ಸೊಳ್ಳೆಗಳನ್ನು ಓಡಿಸಲು ಸಣ್ಣ ಯಂತ್ರವೊಂದಿದ್ದರೆ ಸಾಕು. ಎಲೆಕ್ಟ್ರಿಕ್ ವಾಹನಗಳನ್ನು ರಸ್ತೆ ಬದಿಯಲ್ಲಿಯೇ ರಿಚಾರ್ಜ್ ಮಾಡಲು ಸೋಲಾರ್ ಯಂತ್ರ. ನೀರಿನಡಿಯಲ್ಲಿ ಏನಿದೆ ಎಂಬುದನ್ನು ಮೇಲೆ ನಿಂತೇ ನೋಡುವ ತಂತ್ರಜ್ಞಾನ.

ಕಸವನ್ನು ಅತಿವೇಗದಲ್ಲಿ ಗೊಬ್ಬರವಾಗಿ ಪರಿವರ್ತಿಸುವ ವಿಧಾನ. ಕೊಳಚೆ ನೀರನ್ನು ಶುದ್ಧೀಕರಿಸಿ ಕೃಷಿಗೆ ಬಳಕೆ. ನೆಲದ ಮೇಲೂ ಹೋಗಿ, ಆಕಾಶದಲ್ಲಿಯೂ ಹಾರಿ ಸ್ವಚ್ಛಗೊಳಿಸುವ ಡ್ರೋನ್ ಮಾದರಿಯ ಯಂತ್ರ..

ಹೀಗೆ ಹುಬ್ಬೇರಿಸುವಂತಹ ಸಂಶೋಧನೆಗಳ ಮಾದರಿಯ ಪ್ರಾತ್ಯಕ್ಷಿಕೆಯನ್ನು ನಗರದ ಬಿಐಇಟಿ ಕಾಲೇಜಿನ ಆವರಣದಲ್ಲಿರುವ ಎಸ್.ಎಸ್.ಮಲ್ಲಿಕಾರ್ಜುನ್ ಸಾಂಸ್ಕೃತಿಕ ಭವನದಲ್ಲಿ ಬಿಐಇಟಿಯ ವಿದ್ಯಾರ್ಥಿಗಳು ಬುಧವಾರ ಪ್ರದರ್ಶಿಸಿದರು.

ಮೆಕ್ಯಾನಿಕಲ್ ದ್ವಿತೀಯ ವರ್ಷದ ವಿದ್ಯಾರ್ಥಿಗಳು ನೂತನ ಮಾದರಿಯನ್ನು ಸಂಶೋಧಿಸಿ, ಏನೇ ಪ್ರಯೋಗ ಮಾಡಿದರೂ ಈ ಸೊಳ್ಳೆಗಳನ್ನು ನಿವಾರಣೆ ಮಾಡಲು ಸಾಧ್ಯವಿಲ್ಲ. ಸೊಳ್ಳೆಗಳು ಕಚ್ಚಿದರೆ ಪರವಾಗಿಲ್ಲ ಎಂದು ಸುಮ್ಮನೆ ಕುಳಿತರೆ ಅದರಿಂದ ಹರಡುವ ರೋಗಗಳು ಜೀವವನ್ನೇ ತೆಗೆಯುತ್ತವೆ. ಈ ಬಿಸಿಗಾಳಿ ಯಂತ್ರ ಬಳಸಿ ಸೊಳ್ಳೆಗಳನ್ನು ಸಂಪೂರ್ಣವಾಗಿ ಸಾಯಿಸಿ ನೆಮ್ಮದಿಯಿಂದ ನಿದ್ದೆ ಮಾಡಬಹುದು ಎಂಬ ಸಲಹೆ ನೀಡಿದ್ದಾರೆ.

ಪ್ರಾಧ್ಯಾಪಕ ಡಾ.ಎ.ಎಸ್.ಶರಣ್ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ ಶರವಣ, ಅಭಿಷೇಕ, ಸುನೀಲ್, ಹರೀಶ್ ಗೌಡ ನೇತೃತ್ವದ ತಂಡ, ಸುಮಾರು 2500 ರೂ. ಮೌಲ್ಯದ ನೂತನ ಮಾದರಿ ಸಂಶೋಧಿಸಿದ್ದಾರೆ. ಈ ಯಂತ್ರ, ಐದು ವರ್ಷ ಬಳಕೆಗೆ ಬರಲಿದ್ದು, ಮನೆಯ ರೂಂಗಳಲ್ಲಿ ಈ ಯಂತ್ರ ಉಪಯೋಗಿಸಿ 50 ಡಿಗ್ರಿ ಸೆಂಟಿಗ್ರೇಡ್ ಬಿಸಿಗಾಳಿ ಬಿಟ್ಟರೆ ಮನೆಯಲ್ಲಿ ಸೇರಿದ ಸೊಳ್ಳೆಗಳು ತನ್ನ ರೆಕ್ಕೆಗಳ ಸ್ವಾಧೀನ ಕಳೆದುಕೊಂಡು ನೆಲಕ್ಕೆ ಬಿದ್ದು ಸಾಯುತ್ತವೆ. ಈ ಯಂತ್ರ ಬಳಕೆಯಿಂದ ದಿನಕ್ಕೆ ಕೇವಲ 3 ರೂ. ವಿದ್ಯುತ್ ಖರ್ಚಾಗಲಿದೆ ಎನ್ನುತ್ತಾರೆ ವಿದ್ಯಾರ್ಥಿಗಳು.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಸಂಶೋಧನೆ ಮಾಡಿದ ಪ್ರಾತ್ಯಕ್ಷಿಕೆಯನ್ನು ಪ್ರಾಂಶುಪಾಲ ಡಾ. ಎಚ್.ಬಿ.ಅರವಿಂದ್ ವೀಕ್ಷಿಸಿದರು.

ಅದೇ ರೀತಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಅಂತಿಮ ವರ್ಷದ ವಿದ್ಯಾರ್ಥಿಗಳು, 10 ಸಾವಿರ ರೂ. ಮೌಲ್ಯದ ಸಾವಯವ ಗೊಬ್ಬರ ತಯಾರಿಸುವ ನೂತನ ಮಾದರಿ ಯಂತ್ರ ಗಮನ ಸೆಳೆಯಿತು. ರೈತರು ಈ ಯಂತ್ರ ಖರೀದಿಸಿ, ತಾವೇ ಸಾವಯವ ಗೊಬ್ಬರ ತಯಾರಿಸಿ ಜಮೀನುಗಳಿಗೆ ಬಳಸುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗಿ ಹೆಚ್ಚಿನ ಇಳುವರಿ ಪಡೆಯಬಹುದು ಎಂದು ಸಂಶೋಧನೆ ವಿದ್ಯಾರ್ಥಿಗಳಾದ ಕಾರ್ತಿಕ್, ಮಂಜುನಾಥ್, ಲಿಖಿನ್ ಗೌಡ, ಕಾರ್ತಿಕ್ ರೆಡ್ಡಿ ತಿಳಿಸಿದರು.

ಬಯೋ ಟೆಕ್ನಾಲಜಿ ವಿಭಾಗದ ವಿದ್ಯಾರ್ಥಿಗಳಾದ ಆರ್.ಬಿ. ರಾಘವೇಂದ್ರ, ಎ.ಎಂ.ನೂತನ್, ಬಸವರಾಜ ರಾಜೇಂದ್ರ ಪಾಟೀಲ್, ಓಜಸ್ ಎಂ.ಭಾರ್ಗವ, ದರ್ಶನ ಎಸ್. ತೋಟದ್ ಸಂಶೋಧಿಸಿದ್ದ ಅಡಕೆ ಸಿಪ್ಪೆಯಲ್ಲಿ ತಯಾರಿಸಿದ ಡೈಪರ್ಸ್ ಮತ್ತು ಬ್ಯಾಂಡೇಜ್ ಉತ್ಪನ್ನಗಳು ಗಮನ ಸೆಳೆದವು. ಇನ್ನು ಸಿವಿಲ್,ಟೈಕ್ಸ್‌ಟೈಲ್, ಎಲೆಕ್ಟ್ರಾನಿಕ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಿಕಲ್, ಕೆಮಿಕಲ್, ಇನ್ಫಾರ್ಮೇಶನ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಸಂಶೋಧನೆ ಮಾಡಿದ ಮಾದರಿಗಳು ಕೂಡ ಗಮನ ನೋಡುಗರ ಸೆಳೆದವು.

ಕಾಲೇಜು ಪ್ರಾಂಶುಪಾಲರಾದ ಡಾ.ಎಚ್.ಬಿ.ಅರವಿಂದ, ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ ಮತ್ತು ಎಲ್ಲ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ವಿದ್ಯಾರ್ಥಿಗಳ ಆವಿಷ್ಕಾರಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದರು.

## 10 ವಿಭಾಗದ ವಿದ್ಯಾರ್ಥಿಗಳಿಂದ ಸಂಶೋಧನೆ

ದಾವಣಗೆರೆ: ಬಿಐಇಟಿಯ 10 ವಿಭಾಗಗಳ ವಿದ್ಯಾರ್ಥಿಗಳು 64 ರೀತಿಯ ಸಂಶೋಧನೆ ಮಾಡಿದ್ದಾರೆ. ಅವುಗಳ ಮಾದರಿಯನ್ನು ಪ್ರದರ್ಶಿಸಲಾಗುತ್ತಿದೆ. ತಾಂತ್ರಿಕವಾಗಿ ಯಾವುದು ಅತ್ಯುತ್ತಮ ಎಂದು ಗುರುತಿಸಿ ಬಹುಮಾನ ವಿತರಿಸಲಾಗಿದೆ. ಸಾರ್ವಜನಿಕರ ಉಪಯೋಗಕ್ಕೆ ಹೆಚ್ಚು ಬರುವಂಥದ್ದು ಯಾವುದು ಎಂದು ಗುರುತಿಸಲಾಗುವುದು ಎಂದು ಬಿಐಇಟಿ ಪ್ರಾಂಶುಪಾಲ ಡಾ. ಅರವಿಂದ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗ ಸಂಶೋಧನೆಗಳಿಗೆ ಆರ್ಥಿಕ ಸಂಪನ್ಮೂಲಗಳ ಕೊರತೆ ಇಲ್ಲ. ನ್ಯೂ ಏಜ್ ಇನ್‌ಕ್ಯುಬೇಶನ್ ನೆಟ್‌ವರ್ಕ್, ವಿಟಿಯು, ಕೆಎಸ್‌ಸಿಎಸ್‌ಟಿ, ಎಐಸಿಟಿಇ, ಕೆಎಸ್‌ಟಿಎಗಳು ಸಂಶೋಧನೆಗಳಿಗೆ ಹಣ ಒದಗಿಸುತ್ತಿವೆ. ಈ ಸಂಸ್ಥೆಗಳು ಆಯ್ಕೆ ಮಾಡದ ಸಂಶೋಧನೆಗಳಿಗೆ ಬಿಐಇಟಿಯೇ ಹಣ ನೀಡುತ್ತದೆ ಎಂದರು.

ಬಿಐಇಟಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಹಾಗಾಗಿ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ವರ್ಷದಿಂದ ವರ್ಷಕ್ಕೆ ಇಲ್ಲಿನ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗುತ್ತಿದ್ದಾರೆ. 2020-21ರಲ್ಲಿ 357 ವಿದ್ಯಾರ್ಥಿಗಳು ಆಯ್ಕೆಯಾಗಿದ್ದರೆ, 2021-22ರಲ್ಲಿ 648 ವಿದ್ಯಾರ್ಥಿಗಳು ಆಯ್ಕೆಯಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದರು. ಡಿಎಂಜಿ ಮೋರಿ, ವ್ಯವಸ್ಥಾಪಕ ನಿರ್ದೇಶಕ ಸುನಿಲ್ ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್, ಪಿಆರ್‌ಒ ದೇಸಾಯಿ ಗೋಷ್ಠಿಯಲ್ಲಿ ಇದ್ದರು.

ಕನ್ನಡಪ್ರಭ
ಗುರುವಾರ 21.7.2022

# ಅಡಕೆ ನಾರಲ್ಲಿ ಡೈಪರ್, ತರಕಾರಿ ತ್ಯಾಜ್ಯದಿಂದ ಗೊಬ್ಬರ

## ದಾವಣಗೆರೆ ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳ ಆಲೋಚನೆಗೆ ತಕ್ಕಂತೆ 64 ವಿಶಿಷ್ಟ ಮಾದರಿಗಳ ಪ್ರದರ್ಶನ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಅಡಕೆ ನಾರಿನಿಂದ ಡೈಪರ್ ತಯಾರಿ, ತರಕಾರಿ ತ್ಯಾಜ್ಯದಿಂದ ಉತ್ಕೃಷ್ಟ ಗೊಬ್ಬರ ತಯಾರಿಕೆ, ಕೊಳಚೆ ನೀರನ್ನು ಸಂರಕ್ಷಿಸುವ ಮೂಲಕ ಕೃಷಿಗೆ ಬಳಕೆ, ರಸ್ತೆ ಬದಿಯೇ ಎಲೆಕ್ಟ್ರಿಕ್ ವಾಹನ ರೀಚಾರ್ಜ್ ಮಾಡುವ ಸೋಲಾರ್ ಯಂತ್ರ. ಹೀಗೆ ಸುಮಾರು 64 ಸಂಶೋಧನೆಗಳ ಮಾದರಿಗಳ ಪ್ರಾತ್ಯಕ್ಷಿಕೆ, ಪ್ರದರ್ಶನಕ್ಕೆ ಇಲ್ಲಿನ ಬಿಐಇಟಿ ಕಾಲೇಜು ಸಾಕ್ಷಿಯಾಯಿತು.

ನಗರದ ಬಿಐಇಟಿ ಕಾಲೇಜಿನ ಎಸ್ಸೆಸ್ ಮಲ್ಲಿಕಾರ್ಜುನ ಸಭಾಂಗಣದಲ್ಲಿ ಬುಧವಾರ ಇನ್ ಹೌಸ್ ಪ್ರಾಜೆಕ್ಟ್ ಎಕ್ಸಿಬಿಷನ್-2022ನಲ್ಲಿ ಕಾಲೇಜಿನ 10 ವಿವಿಧ ವಿಭಾಗಗಳ ವಿದ್ಯಾರ್ಥಿಗಳ ತಂಡ ಸಿದ್ಧಪಡಿಸಿದ್ದ ಸುಮಾರು 64 ಪ್ರಾಜೆಕ್ಟ್‌ಗಳ ಸಂಶೋಧನೆ, ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

ಸದ್ಯ ರೈತರ ಬಾಳಿಗೆ ಆಧಾರವಾಗಿರುವ ಅಡಕೆ ತೋಟಗಳಲ್ಲಿ ವ್ಯರ್ಥವಾಗುವಂತಹ ಅಡಕೆ ಸಿಪ್ಪೆಯ ನಾರನ್ನು ಸಂಸ್ಕರಿಸಿ, ಡೈಪರ್ ಸಿದ್ಧಪಡಿಸಲಾಗಿದೆ. ಡೈಪರ್‌ಗಳೆಂದರೆ ರಾಸಾಯನಿಕ ವಸ್ತುಗಳನ್ನು ಹಾಕಿ, ಮಾಡುವುದರಿಂದ ಧರಿಸಿದವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವುದು ಸಾಮಾನ್ಯ. ಆದರೆ, ಕಾಲೇಜಿನ ಜೈವಿಕ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಾದ ರಾಘವೇಂದ್ರ, ಓಜಸ್, ನೂತನ್, ಬಸವರಾಜ ಅಡಿಕೆ ನಾರಿನಿಂದ ಸಿದ್ಧಪಡಿಸಿದ ಡೈಪರ್ ಗಮನ ಸೆಳೆಯಿತು. ಈಗಾಗಲೇ ಈ ಮಾದರಿ ಕೆಎಸ್‌ಸಿಎಸ್‌ಟಿಗೂ ಆಯ್ಕೆಯಾಗಿದೆ ಎಂದು ವಿಭಾಗದ ಬೋಧಕ ಡಾ.ಎನ್.ಎಸ್.ಮಂಜುನಾಥ ತಿಳಿಸಿದರು.

ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಅಂತಿಮ ವರ್ಷದ ಅಮೃತ್, ಎಸ್.ಕೆ.ಮನೋಜ, ಪಾಟೀಲ್ ತಂಡವು ನೀರಾವರಿ ಅಲ್ಲದ ಬೆದ್ದಲೂ ಭೂಮಿಗೆ ಚರಂಡಿ ತ್ಯಾಜ್ಯ ನೀರನ್ನೇ ಸಂಸ್ಕರಿಸಿ, ಬೆಳೆಗೆ ಹರಿಸುವ ಮಾದರಿ ಸಿದ್ಧಪಡಿಸಿದ್ದಾರೆ.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಬುಧವಾರ ಇನ್ ಹೌಸ್ ಪ್ರಾಜೆಕ್ಟ್ ಎಕ್ಸಿಬಿಷನ್-2022 ವೀಕ್ಷಿಸುತ್ತಿರುವ ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ, ಬೆಂಗಳೂರಿನ ಡಿಎಂಡಿ ಎಂಟಿಆರ್‌ಐ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ರಾವ್, ಉಪಾಧ್ಯಕ್ಷ ಪ್ರಶಾಂತ ಗುರುಪ್ರಸಾದ.

ರೈತ ಸ್ನೇಹಿಯಾದ ಈ ಮಾದರಿಗೆ ಈಗಾಗಲೇ ರಾಷ್ಟ್ರ ಪ್ರಶಸ್ತಿಯೂ ದೊರೆತಿದೆ ಎನ್ನುತ್ತಾರೆ ವಿಭಾಗದ ಬೋಧಕರು. ಚರಂಡಿ ನೀರನ್ನು ಸಂಸ್ಕರಿಸಿ, ಹೊಲಗಳಿಗೆ ನೀರು ಹಾಯಿಸಬಹುದು. ಅಲ್ಲದೇ, ಸಂಸ್ಕರಿಸಿ, ಉಳಿದ ತ್ಯಾಜ್ಯವನ್ನು ಬೆಳೆಗಳಿಗೆ ಗೊಬ್ಬರವಾಗಿಯೂ ಬಳಕೆ ಮಾಡಲು ಅವಕಾಶವಿದೆ. ಇದರಿಂದ ಕಡಿಮೆ ಖರ್ಚು, ನೀರಿನ ಸದ್ಬಳಕೆ, ಉತ್ಕೃಷ್ಟ ಗೊಬ್ಬರವೂ ರೈತರಿಗೆ ಸಿಗುತ್ತದೆನ್ನುತ್ತಾರೆ ವಿದ್ಯಾರ್ಥಿ ಅಮೃತ್.

ಹಾಸ್ಟೆಲ್‌ಗಳಲ್ಲಿ ನಿತ್ಯ ವ್ಯೂಸಿಗುವಂತಹ ಸಾಕಷ್ಟು ಪ್ರಮಾಣದ ತರಕಾರಿ ತ್ಯಾಜ್ಯವನ್ನು ಕಸಕ್ಕೆ ಸುರಿಯಲಾಗುತ್ತದೆ. ಆದರೆ, ಕಾಲೇಜಿನ ಜೈವಿಕ ಶಾಸ್ತ್ರ ವಿಭಾಗದ ಗೌರಿ, ಸಿಂಚನಾ, ಅರ್ಪಿತಾ, ವಿಶ್ವನಾಯ್ಕ, ಅಣ್ಣೇಶ ಅತ್ಯಾದ ತರಕಾರಿ ತ್ಯಾಜ್ಯವನ್ನು ಉತ್ಕೃಷ್ಟ ಗೊಬ್ಬರವನ್ನಾಗಿ ಮಾಡಿ, ಸೈ ಅನಿಸಿಕೊಂಡಿದ್ದಾರೆ. ಹಾರು ಬೂದಿಯನ್ನು ಶೇ.30ರಷ್ಟು ಬಳಸಿ, ಸಿಮೆಂಟ್ ಸಿದ್ಧಪಡಿಸಲಾಗುತ್ತಿತ್ತು. ಆದರೆ. ಶೇ.50ರಷ್ಟು ಹಾರು ಬೂದಿ, ಸಿಮೆಂಟ್ ಬಳಸಿಕೊಂಡು ಸಿಮೆಂಟ್ ತಯಾರಿಕೆ, ನೀರು ಇಂಗುವಂತೆ ಪಾರ್ಕ್‌ಗಳಲ್ಲಿ ಪಾದಚಾರಿ ಪಥ ನಿರ್ಮಿಸುವ ಯೋಜನೆ, ಸೊಳ್ಳೆಗಳನ್ನು ಓಡಿಸಲು ಯಾವುದೇ ಲಿಕ್ವಿಡ್, ಕಾಯಿಲ್ ಇಲ್ಲದಂತೆ ಬಿಸಿಗಾಳಿ ಹಾಯಿಸುವ ಮೂಲಕ ಸೊಳ್ಳೆ ಓಡಿಸುವ ಸಣ್ಣ ಯಂತ್ರ ಹೀಗೆ ಎಲ್ಲಾ 64 ಮಾದರಿಗಳು ಪ್ರಶಂಸೆಗೆ ಪಾತ್ರವಾದವು.

ಬೆಂಗಳೂರಿನ ಡಿಎಂಡಿ ಎಂಟಿಆರ್‌ಐ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ರಾವ್, ಉಪಾಧ್ಯಕ್ಷ ಪ್ರಶಾಂತ ಗುರುಪ್ರಸಾದ ಕಾಲೇಜಿನ ಇನ್ ಹೌಸ್ ಪ್ರಾಜೆಕ್ಟ್ ಎಕ್ಸಿಬಿಷನ್ ಉದ್ಘಾಟಿಸಿದರು. ಕಾಲೇಜು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ, ಕೆಮಿಕಲ್ ವಿಭಾಗದ ಡೀನ್ ದೇಸಾಯಿ ಇದ್ದರು.

### ಆಯ್ದ ಸಂಶೋಧನೆಗೆ 5 ಸಾವಿರ ಪ್ರೋತ್ಸಾಹಧನ

ಬಿಐಇಟಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಶೋಧನೆಗೆ ಪ್ರತಿ ವರ್ಷ ಪ್ರೋತ್ಸಾಹಿಸಿಕೊಂಡು ಬರುತ್ತಿದ್ದು, ಆಯ್ದ ಸಂಶೋಧನೆಗಳಿಗೆ ಕಾಲೇಜಿನಿಂದಲೇ 5 ಸಾವಿರ ರು. ಪ್ರೋತ್ಸಾಹಧನ ನೀಡಲಾಗುತ್ತಿದೆ ಎಂದು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ ತಿಳಿಸಿದರು. ಕಾಲೇಜಿನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ 10 ವಿಭಾಗಗಳ ವಿದ್ಯಾರ್ಥಿಗಳ 64 ಸಂಶೋಧನೆಗಳು ಪ್ರದರ್ಶನಗೊಳ್ಳುತ್ತಿದೆ. ಅತೀ ಹೆಚ್ಚು ಸಂಶೋಧನೆಗಳನ್ನು ಈ ಪ್ರದರ್ಶನದಲ್ಲಿ ಕಾಣುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸಶೋಧನೆಗಾಗಿ ಆಯ್ಕೆಯಾದ ಕೆಲ ಮಾದರಿಗಳಿಗೆ ಕೆಎಸ್‌ಸಿಎಸ್‌ಟಿ, ಎನ್‌ಐಎನ್‌ನಿಂದ ಸುಮಾರು 2-3 ಲಕ್ಷ ರು. ವರೆಗೆ ಸಹಾಯಧನ ಸಿಗುತ್ತದೆ. ತಮ್ಮ ಕಾಲೇಜಿನಿಂದ ಈ ಸಲ 648 ವಿದ್ಯಾರ್ಥಿಗಳು ಪ್ರತಿಷ್ಠಿತ ಕಂಪನಿಗಳಿಗೆ ನೇಮಕವಾಗಿದ್ದಾರೆ. ವಾರ್ಷಿಕ 4ರಿಂದ ಗರಿಷ್ಠ 26 ಲಕ್ಷ ರು.ವರೆಗೆ ವೇತನವಿರುವ ಹುದ್ದೆಗಳಿಗೆ ವಿವಿಧ ಕಂಪನಿಗಳಲ್ಲಿ ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಕಾಲೇಜಿನ ಅತ್ಯುತ್ತಮ ಸಾಧನೆ ಇದು ಎಂದು ಡಾ.ಅರವಿಂದ ಹರ್ಷ ವ್ಯಕ್ತಪಡಿಸಿದರು.

### ಗಮನ ಸೆಳೆದ ಬಿಐಇಟಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಶೋಧನೆಗಳ ಮಾದರಿಯ ಪ್ರಾತ್ಯಕ್ಷಿಕೆ

# ರಸ್ತೆಬದಿ ವಾಹನಗಳ ರೀಚಾರ್ಜ್, ಸೊಳ್ಳೆ ಓಡಿಸಲು ಬಿಸಿಗಾಳಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸೊಳ್ಳೆ ಸಾಯಿಸಲು ಯಾವುದೇ ಲಿಕ್ವಿಡ್, ಕಾಯಿಲ್‌ಗಳು ಬೇಕಿಲ್ಲ. ಬಿಸಿಗಾಳಿ ಹಾಯಿಸುವ ಮೂಲಕ ಸೊಳ್ಳೆಗಳನ್ನು ಓಡಿಸಲು ಸಣ್ಣ ಯಂತ್ರ ಇದ್ದರೆ ಸಾಕು. ನೀರಿನಡಿಯಲ್ಲಿ ಏನಿದೆ ಎಂಬುದನ್ನು ಮೇಲೆ ನಿಂತೇ ನೋಡುವ ತಂತ್ರಜ್ಞಾನ. ಎಲೆಕ್ಟ್ರಿಕ್ ವಾಹನಗಳನ್ನು ರಸ್ತೆ ಬದಿಯಲ್ಲಿಯೇ ರೀಚಾರ್ಜ್ ಮಾಡಲು ಸೋಲಾರ್ ಯಂತ್ರ, ಕೊಳಚೆ ನೀರನ್ನು ಶುದ್ಧೀಕರಿಸಿ ಕೃಷಿಗೆ ಬಳಕೆ. ಕಸವನ್ನು ಅತಿವೇಗದಲ್ಲಿ ಗೊಬ್ಬರವಾಗಿ ಪರಿವರ್ತಿಸುವ ವಿಧಾನ. ನೆಲದ ಮೇಲೂ ಹೋಗಿ, ಆಕಾಶದಲ್ಲಿಯೂ ಹಾರಿ ಸ್ವಚ್ಛಗೊಳಿಸುವ ಡ್ರೋನ್ ಮಾದರಿಯ ಯಂತ್ರ...

ಹೀಗೆ ಹುಬ್ಬೇರಿಸುವಂತಹ ಸಂಶೋಧನೆಗಳ ಮಾದರಿಯ ಪ್ರಾತ್ಯಕ್ಷಿಕೆಯನ್ನು ಬಿಐಇಟಿಯ ವಿದ್ಯಾರ್ಥಿಗಳು ಬುಧವಾರ ಪ್ರದರ್ಶಿಸಿದರು.

ಹಾರುಬೂದಿಯನ್ನು ಶೇ 30ರಷ್ಟು ಬಳಸಿ ಸಿಮೆಂಟ್ ತಯಾರಿಸಲಾಗುತ್ತಿತ್ತು. ಶೇ 50ರಷ್ಟು ಬಳಸಿ ಸಿಮೆಂಟ್ ತಯಾರಿ, ನೀರು ಇಂಗುವ ರೀತಿಯಲ್ಲಿ ಪಾರ್ಕ್‌ಗಳಲ್ಲಿ ಪಾದಚಾರಿ ಪಥಗಳನ್ನು ನಿರ್ಮಿಸುವುದು, ಸೆಣಬಿನಿಂದ ವಿವಿಧ ವಸ್ತುಗಳನ್ನು ತಯಾರಿಸುವುದು, ತ್ಯಾಜ್ಯವನ್ನು ಅಟೊಮೆಟಿಕ್ ಆಗಿ ವಿಂಗಡಿಸುವ ಯಂತ್ರ, ಮುಟ್ಟಿದರೆ ಮುನಿ ಸಸ್ಯದ ಎಲೆಯಿಂದ ಚರ್ಮರೋಗ ನಿವಾರಣೆಯ ಔಷಧ, ಸ್ಮಾರ್ಟ್ ಹಸಿರುಮನೆಯನ್ನು ಮೊಬೈಲ್ ಮೂಲಕ ನಿಯಂತ್ರಿಸುವುದು, ಹೃದಯ ಸಂಬಂಧಿ ಕಾಯಿಲೆ, ಕ್ಯಾನ್ಸರ್ ಸಹಿತ ವಿವಿಧ ರೋಗಗಳನ್ನು ಕಂಡು ಹಿಡಿಯುವುದು ಮುಂತಾದವುಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಆಧುನಿಕ 3ಡಿ ಪ್ರಿಂಟರ್, ಬಹು ಉಪಯೋಗಿ ಕೃಷಿ ವಾಹನ, ಸ್ಮಾರ್ಟ್ ಟ್ರಾಲಿ, ವೈರ್‌ಲೆಸ್ ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್, ಬಣ್ಣಗಳ ಆಧಾರದಲ್ಲಿ ಚಲಿಸುವ ರೋಬೊ, ಅಡಿಕೆಯ ಸಿಪ್ಪೆಯಿಂದ ಬ್ಯಾಂಡೇಜ್ ಮತ್ತು ಡೈಪರ್ಸ್ ತಯಾರಿ, ಸಾವಯವ ಗೊಬ್ಬರ ತಯಾರಿ, ಅತಿ ಕಡಿಮೆ ಮಣ್ಣು, ನೀರು ಬಳಸಿ ಅರಣ್ಯ ಬೆಳೆಸುವುದು, ನ್ಯಾಚುರಲ್ ಡೈ, ರಸ್ತೆಯಲ್ಲಿ ವಾಹನಗಳು ಹೋಗುವಾಗ ಮಾತ್ರ ಬೀದಿದೀಪದ ಪ್ರಕಾಶ ಹೆಚ್ಚುವ, ಉಳಿದ ಸಮಯದಲ್ಲಿ ಪ್ರಕಾಶ ಕಡಿಮೆಯಾಗುವ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ನೀಡಿದರು.

ಪಡಿತರ ವಿತರಣೆಯನ್ನು ಸ್ಮಾರ್ಟ್‌ಕಾರ್ಡ್ ಬಳಸಿ ಮಾಡಬಹುದು. ಕಾರ್ಡ್ ಸ್ವೈಪ್ ಮಾಡಿದಾಗ ಅವರಿಗೆ ಸರ್ಕಾರ ನಿಗದಿ ಮಾಡಿದ ಪಡಿತರ (ಎಟಿಎಂ ಮಾದರಿಯಲ್ಲಿ) ಬಂದು ಬೀಳುವ ಪದ್ಧತಿಯನ್ನು ವಿದ್ಯಾರ್ಥಿಗಳು ಸಂಶೋಧಿಸಿರುವುದನ್ನು ತೋರಿಸಿದರು.

ಇನ್‌ಫರ್ಮೇಶನ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್, ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಟೆಕ್ಸ್‌ಟೈಲ್, ಬಯೋ ಟೆಕ್ನಾಲಜಿ, ಕೆಮಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಇನ್‌ಸ್ಟ್ರುಮೆಂಟೇಶನ್, ಕಂಪ್ಯೂಟರ್ ಸೈನ್ಸ್ ವಿಭಾಗಗಳ ವಿದ್ಯಾರ್ಥಿಗಳು ಈ ಪ್ರಾತ್ಯಕ್ಷಿಕೆಗಳನ್ನು ನೀಡಿದರು.





ಅತಿ ಕಡಿಮೆ ಮಣ್ಣು ಮತ್ತು ನೀರು ಬಳಸಿ ಹಸಿರು ಬೆಳೆಸುವ ವಿಧಾನದ ಬಗ್ಗೆ ದಾವಣಗೆರೆಯ ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳು ಡಿಎಂಜಿ ಮೋರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ರಾವ್, ಡಿಎಂಜಿ ಕಂಪನಿಯ ಮಾರುಕಟ್ಟೆ ವಿಭಾಗದ ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್, ಪ್ರಾಚಾರ್ಯ ಡಾ. ಎಚ್.ಬಿ. ಅರವಿಂದ್ ಅವರಿಗೆ ವಿವರಿಸಿದರು (ಎಡಚಿತ್ರ). ಪ್ರಾತ್ಯಕ್ಷಿಕೆಯನ್ನು ಕುತೂಹಲದಿಂದ ವೀಕ್ಷಿಸುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

## 64 ಸಂಶೋಧನೆಗಳು

ಬಿಐಇಟಿಯ 10 ವಿಭಾಗಗಳ ವಿದ್ಯಾರ್ಥಿಗಳು 64 ರೀತಿಯ ಸಂಶೋಧನೆಗಳನ್ನು ಮಾಡಿದ್ದಾರೆ. ಅವುಗಳ ಮಾದರಿಯನ್ನು ಪ್ರದರ್ಶಿಸಲಾಗುತ್ತಿದೆ. ತಾಂತ್ರಿಕವಾಗಿ ಯಾವುದು ಅತ್ಯುತ್ತಮ ಎಂದು ಗುರುತಿಸಿ ಬಹುಮಾನ ವಿತರಿಸಲಾಗಿದೆ. ಸಾರ್ವಜನಿಕರ ಉಪಯೋಗಕ್ಕೆ ಹೆಚ್ಚು ಬರುವಂಥದ್ದು ಯಾವುದು ಎಂದು ಗುರುತಿಸಲಾಗುವುದು ಎಂದು ಬಿಐಇಟಿ ಪ್ರಾಂಶುಪಾಲ ಡಾ. ಅರವಿಂದ ತಿಳಿಸಿದರು.

ಈಗ ಸಂಶೋಧನೆಗಳಿಗೆ ಆರ್ಥಿಕ ಸಂಪನ್ಮೂಲಗಳ ಕೊರತೆ ಇಲ್ಲ. ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್, ವಿಟಿಯು, ಕೆಎಸ್‌ಸಿಎಸ್‌ಟಿ, ಎಐಸಿಟಿಇ, ಕೆಎಸ್‌ಟಿಎಗಳು ಸಂಶೋಧನೆಗಳಿಗೆ ಹಣ ಒದಗಿಸುತ್ತಿವೆ. ಈ ಸಂಸ್ಥೆಗಳು ಆಯ್ಕೆ ಮಾಡದ ಸಂಶೋಧನೆಗಳಿಗೆ ಬಿಐಇಟಿಯೇ ಹಣ ನೀಡುತ್ತದೆ ಎಂದರು.

ಬಿಐಇಟಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಹಾಗಾಗಿ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ವರ್ಷದಿಂದ ವರ್ಷಕ್ಕೆ ಇಲ್ಲಿನ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗುತ್ತಿದ್ದಾರೆ. 2020-21ರಲ್ಲಿ 357 ಮಂದಿ ಆಯ್ಕೆಯಾಗಿದ್ದರೆ, 2021-22ರಲ್ಲಿ 648 ಮಂದಿ ಆಯ್ಕೆಯಾಗಿರುವುದು ಇದಕ್ಕೆ ಸಾಕ್ಷಿ ಎಂದು ವಿವರಿಸಿದರು.

'ಡಿಎಂಜಿ ಮೋರಿ' ಇದರ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್, ಪಿ.ಆರ್. ದೇಸಾಯಿ ಇದ್ದರು.



## ಕೆಪಿಸಿಸಿ ಉಪಾಧ್ಯಕ ವೇಣುಗೋಪಾಲ್ ವಿಶ್ವಾಸ

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿವಿಧ ಮಾದರಿ ಪ್ರದರ್ಶನ

Udayavani 21-07-2022

# ಗಮನ ಸೆಳೆದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಸಂಶೋಧನಾ ಪ್ರಾತ್ಯಕ್ಷಿಕೆ

**ದಾವಣಗೆರೆ:** ಸೊಳ್ಳೆ ಸಾಯಿಸುವ ಬಿಸಿಗಾಳಿ ಯಂತ್ರ, ಸಾವಯವ ಗೊಬ್ಬರ ಉತ್ಪಾದಕ ಯಂತ್ರ, ಸುರಕ್ಷಾ ಆ್ಯಪ್, ರಸ್ತೆಯಲ್ಲಿ ಕಸ ಮಾತ್ರವಲ್ಲ, ಧೂಳನ್ನೂ ಸ್ವಚ್ಛಗೊಳಿಸುವ ಯಂತ್ರ, ಅಡಕೆ ಸಿಪ್ಪೆಯಲ್ಲಿ ಡೈಪರ್, ಬ್ಯಾಂಡೇಜ್ ತಯಾರಿ...

ಇಂತಹ ತಾಂತ್ರಿಕ ಕೌಶಲ್ಯಕ್ಕೆ ಕೈಗನ್ನಡಿಯಂತಹ ಸಂಶೋಧನೆಯ ಪ್ರಾತ್ಯಕ್ಷಿಕೆ ಕಂಡು ಬಂದಿದ್ದು ಬುಧವಾರ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬಿಐಇಟಿಯ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ನಡೆಸಿದ ನವೀನ ಸಂಶೋಧನೆಗಳ ವಿವಿಧ ಮಾದರಿಗಳ ಪ್ರದರ್ಶನ ಆಕರ್ಷಕವಾಗಿತ್ತು. ಇಂಜಿನಿಯರಿಂಗ್ ವಿದ್ಯಾರ್ಥಿಗಳ ಜಾಣ್ಮೆ ಮತ್ತು ಆವಿಷ್ಕಾರದ ಜಾಣ್ಮೆಗೆ ಸಾಕ್ಷಿಯಾಗಿತ್ತು.

ಪ್ರತಿ ನಿತ್ಯ ಸೊಳ್ಳೆ ಕಡಿತದಿಂದ ಅನುಭವಿಸುವ ತೊಂದರೆ ದೂರ ಮಾಡುವ ಉದ್ದೇಶದೊಂದಿಗೆ ಮೆಕ್ಯಾನಿಕಲ್ ವಿಭಾಗದ ಶರವಣ, ಸುನೀಲ್, ಹರೀಶ್‌ಗೌಡ ಡಾ| ಎ.ಎಸ್. ಶರಣ್ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುವ ಬಿಸಿಗಾಳಿ ಮಾದರಿ ಯಂತ್ರ ಗಮನ ಸೆಳೆಯಿತು. ಬಿಸಿಗಾಳಿ ಯಂತ್ರದಿಂದ ಹೊರ ಬರುವ 50 ಡಿಗ್ರಿ ಸೆಂಟಿಗ್ರೇಡ್ ಬಿಸಿಗಾಳಿ ಯಿಂದ ಸೊಳ್ಳೆಗಳು ನಾಶವಾಗುತ್ತವೆ. ದಿನಕ್ಕೆ ಮೂರು ರೂಪಾಯಿ ವೆಚ್ಚದಲ್ಲಿ ಸೊಳ್ಳೆಗಳ ಕಾಟವಿಲ್ಲದೆ ಸುಖ ನಿದ್ರೆ ಮಾಡಬಹುದು ಎಂದು ತಿಳಿಸಿದರು. ಯಾರಾದರೂ ಆಪತ್ತಿನಲ್ಲಿ ಸಿಲುಕಿಕೊಂಡಲ್ಲಿ ಅವರಿರುವ ಸ್ಥಳದ ಬಗ್ಗೆ ನಿಖರ ಮಾಹಿತಿ ನೀಡುವ ಆ್ಯಪ್ ಸಹ ಗಮನ ಸೆಳೆಯುವಂತಿತ್ತು. ಮೊಬೈಲ್‌ನಲ್ಲಿನ ಆ್ಯಪ್‌ಗೆ ಮೊದಲೇ ಎಲ್ಲ ಮಾಹಿತಿ ಫೀಡ್ ಮಾಡಿರಬೇಕು. ಅಪಾಯ ಏನಾದರೂ ಎದುರಾದಾಗ ಮೊಬೈಲ್ ಅಲ್ಲಾಡಿಸಿದರೆ ಸಾಕು ಅಪಾಯದಲ್ಲಿ ಸಿಲುಕಿರುವವರು ಎಲ್ಲಿದ್ದಾರೆ ಎಂಬುದರ ನಿಖರ ಸ್ಥಳ ಮಾಹಿತಿ ಪೊಲೀಸರಿಗೆ ಇತರರಿಗೆ ರವಾನೆ ಆಗುವಂತೆ ಆ್ಯಪ್ ಸಿದ್ಧಪಡಿಸಲಾಗಿದೆ. ರಸ್ತೆಯಲ್ಲಿ ಕಸ ಸ್ವಚ್ಛ ಮಾಡುತ್ತಾರೆ, ಆದರೆ ಧೂಳು ಸಂಗ್ರಹ ಮಾಡಲಾಗುವುದಿಲ್ಲ. ಅಂತಹ ದೂಳನ್ನು ಸಂಗ್ರಹಿಸುವ ಜೊತೆಗೆ ಸೂಕ್ತ ಜಾಗದಲ್ಲಿ ವಿಲೇವಾರಿ ಮಾಡುವ ಯಂತ್ರದ ಪ್ರಾತ್ಯಕ್ಷಿಕೆ ಗಮನಾರ್ಹವಾಗಿತ್ತು. ಡ್ರೋಣ್ ಮಾದರಿಯ ಯಂತ್ರ ನೆಲದ ಮೇಲೆ ಚಲಿಸಲಿದೆ. ಇತರೆ ಡ್ರೋಣ್‌ಗಳು ನೆಲದ ಮೇಲೆ ಚಲಿಸುವುದಿಲ್ಲ. ಆದರೆ, ನಾವು ಸಿದ್ಧಪಡಿಸಿರುವ ಡ್ರೋಣ್ ಮಾದರಿಯ ಯಂತ್ರ ನೆಲದ ಮೇಲೆ ಚಲಿಸಲಿದೆ, ಮಾತ್ರವಲ್ಲ ಜೊತೆಗೆ ಗಾಳಿಯಲ್ಲೂ ಹಾರಾಡಲಿದೆ. ಸೇನೆಯಲ್ಲೂ ಬಳಕೆ ಮಾಡಲು ಅನುಕೂಲ ಆಗುವಂತೆ ಸಿದ್ಧಪಡಿಸಲಾಗುವುದು ಎಂದು ವಿದ್ಯಾರ್ಥಿಗಳು ತಿಳಿಸಿದರು.



ದಾವಣಗೆರೆ: ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಂಶೋಧನಾ ಮಾದರಿಗಳ ಪ್ರದರ್ಶನ ನಡೆಯಿತು.

## 64 ಸಂಶೋಧನಾ ಮಾದರಿ ಪ್ರದರ್ಶನ

ಬಿಐಇಟಿಯ 8 ವಿಭಾಗಗಳ ವಿದ್ಯಾರ್ಥಿಗಳು 64 ರೀತಿಯ ಸಂಶೋಧನೆಗಳ ಮಾದರಿಯನ್ನು ಪ್ರದರ್ಶಿಸಲಾಗುತ್ತಿದೆ. ತಾಂತ್ರಿಕವಾಗಿ ಯಾವುದು ಅತ್ಯುತ್ತಮ ಎಂದು ಗುರುತಿಸಿ ಬಹುಮಾನ ವಿತರಿಸಲಾಗಿದೆ. ಸಾರ್ವಜನಿಕರ ಉಪಯೋಗಕ್ಕೆ ಹೆಚ್ಚು ಬರುವಂಥದ್ದು ಯಾವುದು ಎಂಬುದನ್ನು ಗುರುತಿಸಲಾಗುವುದು ಎಂದು ಪ್ರಾಂಶುಪಾಲ ಡಾ| ಎಚ್.ಬಿ. ಅರವಿಂದ್ ಪ್ರಾತ್ಯಕ್ಷಿಕೆಗಿಂತ ಮುನ್ನ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈಗ ಸಂಶೋಧನೆಗಳಿಗೆ ಆರ್ಥಿಕ ಸಂಪನ್ಮೂಲಗಳ ಕೊರತೆ ಇಲ್ಲ. ವಿವಿಧೆಡೆಯಿಂದ ಸಂಶೋಧನೆಗಳಿಗೆ ಹಣ ಒದಗಿಸಲಾಗುತ್ತಿದೆ. ಸಂಸ್ಥೆಗಳು ಆಯ್ಕೆ ಮಾಡದ ಸಂಶೋಧನೆಗಳಿಗೆ ಬಿಐಇಟಿಯೇ ಹಣ ನೀಡುತ್ತದೆ. ಬಿಐಇಟಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಹಾಗಾಗಿ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗುತ್ತಿದ್ದಾರೆ. 2020-21ರಲ್ಲಿ 357, 2021-22ರಲ್ಲಿ 648 ವಿದ್ಯಾರ್ಥಿಗಳು ವಿವಿಧ ಪ್ರತಿಷ್ಠಿತ ಕಂಪನಿಗಳಿಗೆ ನೇಮಕವಾಗಿದ್ದಾರೆ ಎಂದರು. ಡಿಎಂಜಿ ಮೋರಿ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್, ಪಿಆರ್‌ಒ ಡಾ| ಜಿ.ಪಿ. ದೇಸಾಯಿ ಇತರರು ಇದ್ದರು.

ವತಿಯಿಂದ ಉಚಿತ ಲ್ಯಾಪ್ ಟಾಪ್‌ಗಳನ್ನು ವಿತರಿಸಲಾಯಿತು.

vijayakarnataka 21-07-2022

# ಬಿಐಇಟಿ ವಿದ್ಯಾರ್ಥಿಗಳ ಹತ್ತಾರು ಸಂಶೋಧನೆ

## ಇನ್ ಹೌಸ್ ಪ್ರಾಜೆಕ್ಟ್ ಪ್ರದರ್ಶನ | ನಾನಾ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ 64 ಯೋಜನೆ ತಯಾರಿ | 10 ವಿಭಾಗಗಳ ವಿದ್ಯಾರ್ಥಿಗಳು ಭಾಗಿ

■ ವಿಕ ಸುದ್ದಿಲೋಕ ದಾವಣಗೆರೆ

ಡ್ಯಾಂ ಆಳದಲ್ಲಿ ತಡೆಗೋಡೆಗೆ ಆಗಿರುವ ಹಾನಿಯಿಂದ ಹಿಡಿದು ಅಲ್ಲಿನ ಚಿತ್ರಣ ನೀಡುವ ರಿಮೋಟ್ ಕಂಟ್ರೋಲ್ ಸಬ್‌ಮರ್ಸಿಬಲ್, ವೈರ್‌ಲೆಸ್ ಎಲೆಕ್ಟ್ರಾನಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್, ಬಹು ಉದ್ದೇಶಿತ ಕೃಷಿ ವಾಹನ, ಇಂಟಲಿಜೆಂಟ್ ಹೈಡ್ರೋಪೋನಿಕ್ ಸಿಸ್ಟಮ್..!

**ಡ್ಯಾಂ ಆಳದಲ್ಲಿ ತಡೆಗೋಡೆ ಹಾನಿ ಶೋಧನೆಗೆ ಯಂತ್ರ**

ಇವು ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳು ಈ ವರ್ಷದಲ್ಲಿ ಸಂಶೋಧಿಸಿದ ಪ್ರಾಜೆಕ್ಟ್‌ಗಳ ಫಲದ ಸ್ಯಾಂಪಲ್‌ಗಳವು. ಕಾಲೇಜು ಆವರಣದ ಎಸ್‌ಎಸ್‌ಎಂ ಸಾಂಸ್ಕೃತಿಕ ಕೇಂದ್ರದಲ್ಲಿ ಬುಧವಾರ ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನದಲ್ಲಿ ಹೊರ ಹೊಮ್ಮಿದ ಹತ್ತಾರು ಸಂಶೋಧನಾ ಯೋಜನೆಗಳನ್ನು ಪ್ರದರ್ಶಿಸಲಾಯಿತು. ಎಂಜಿನಿಯರಿಂಗ್‌ನ ಹತ್ತು ವಿಭಾಗದ ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್‌ಗಳೊಂದಿಗೆ ಪಾಲ್ಗೊಂಡಿದ್ದರು.

**ನಾನಾ ಸಂಶೋಧನೆಗಳು:** ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿವೇಕ್, ಶ್ರೀನಿವಾಸ್, ಶಿವನಗೌಡ, ಪವನ್ ತಂಡ ಡ್ಯಾಂ ಆಳದಲ್ಲಿ ತಡೆಗೋಡೆಗೆ ಆಗಿರಬಹುದಾದ ಹಾನಿ ಸೇರಿದಂತೆ ಅಲ್ಲಿನ ಚಿತ್ರಣ ಸೆರೆ ಹಿಡಿಯುವ ರಿಮೋಟ್ ಕಂಟ್ರೋಲ್ ಸಬ್ ಮರ್ಸಿಬಲ್‌ನ ಶೋಧನೆ ಗಮನ ಸೆಳೆಯಿತು. ಇದು ಮಹತ್ವದ ಸಂಶೋಧನೆ ಎಂಬುದು ಸಂಶೋಧಿಸಿದ ವಿದ್ಯಾರ್ಥಿಗಳ ಅಭಿಪ್ರಾಯ.

**ಮೊಬೈಲ್ ಚಾರ್ಜಿಂಗ್ ಸ್ಟೇಷನ್:** ಪೆಟ್ರೋಲ್, ಡೀಸೆಲ್ ಬೆಲೆ ಗಗನಕ್ಕೆ ಏರಿದ್ದು ಆರ್ಥಿಕ ಉಳಿತಾಯದ ಜತೆ ಸಂಪನ್ಮೂಲಗಳ ಉಳಿತಾಯದ ಭಾಗವಾಗಿ ಎಲೆಕ್ಟ್ರಾನಿಕ್ ವಾಹನಗಳ ಕಡೆ ಜನರ ಚಿತ್ತ ವಾಲುತ್ತಿದೆ. ಆದರೆ, ಇದಕ್ಕೆ ಚಾರ್ಜಿಂಗ್ ಪಾಯಿಂಟ್‌ಗಳ ಬಗ್ಗೆ ಸಮಸ್ಯೆ ಬಾಧಿಸುತ್ತಿದೆ. ಇದಕ್ಕೆ ಎಲೆಕ್ಟ್ರಾನಿಕ್ಸ್ ವಿಭಾಗದ ಗುರುನಂದನ್, ವಿದ್ಯಾ, ಮಹಾಲಕ್ಷ್ಮೀ, ನಂದೀಶ್ ವಿದ್ಯಾರ್ಥಿಗಳು ಸಂಶೋಧನೆ ಮೂಲಕ ಪರಿಹಾರ ಕಂಡು ಹಿಡಿದಿದ್ದಾರೆ.

ಈಗಾಗಲೇ ಜಪಾನ್ ಸೇರಿ ಇನ್ನಿತರ ದೇಶಗಳಲ್ಲಿ ಚಾಲ್ತಿಯಲ್ಲಿರುವ ಮೊಬೈಲ್ ಚಾರ್ಜಿಂಗ್ ಸ್ಟೇಷನ್‌ನ್ನು ಸಂಶೋಧಿಸಿ ಪ್ರದರ್ಶಿಸಿದರು. ತುರ್ತಾಗಿ ಈ ಸಂಶೋಧನೆಯ ಫಲ ಜನಕ್ಕೆ ಸಿಗಬೇಕಿದೆ, ಹಾಗಾಗಿ ನಾಲ್ಕು ಗೋಡೆಯಿಂದ ಯೋಜನೆ ಹೊರ ತಂದು ಜನೋಪಯೋಗಿ ಮಾಡುವ ಯೋಜನೆಯ ಮಾರ್ಗದರ್ಶಿ ಡಾ. ಅವಿನಾಶ್ ಮತ್ತು ಕಾಲೇಜು ಹೆಗಲ ಮೇಲಿದೆ.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಬುಧವಾರ ನಡೆದ ಇನ್ ಹೌಸ್ ಪ್ರಾಜೆಕ್ಟ್ ಪ್ರದರ್ಶನದಲ್ಲಿ ಯೋಜನೆಗಳನ್ನು ಪ್ರಾಚಾರ್ಯ ಡಾ.ಅರವಿಂದ್, ಡಿಎಂಜಿ ಮೋರಿ ಸಂಸ್ಥೆಯ ಸುನಿಲ್‌ರಾವ್ ವೀಕ್ಷಿಸಿದರು.

### 64 ಪ್ರಾಜೆಕ್ಟ್‌ಗಳ ಪ್ರದರ್ಶನ

ಲಾಟ್ ಎನೆಬಲ್ಡ್ ವಿಂಡ್ ಟರ್ಬೈನ್ ಡಾಟಾ ಮಾನಿಟರಿಂಗ್ ಸಿಸ್ಟಮ್, ಅಪ್ಲಿಕೇಷನ್ ಫಾರ್ ಮಾನಿಟರಿಂಗ್ ಪ್ರೆಗ್ನೆಂಟ್ ವುಮೆನ್ ಯೂಸಿಂಗ್ ಐಒಟಿ, ಕಾಟನ್ ಲೀಫ್ ಡಿಸೀಸ್ ಡಿಟೆಕ್ಷನ್ ಯೂಸಿಂಗ್ ಡೀಪ್ ಲರ್ನಿಂಗ್, ಮಲ್ಟಿ ಕಲರ್ ಲೈನ್ ಫಾಲೋವರ್ ರೋಬೋಟ್, ಎಕ್ಸ್‌ಟ್ರಾಕ್ಷನ್ ಆಫ್ ನ್ಯಾಚುರಲ್ ಡೈ ಕಲೆಕ್ಷನ್ ಫ್ರಂ ಬಿಟರ್ ಸ್ಕಿನ್ ಆಫ್ ಆನಿಯನ್ ಅಂಡ್ ಇಟ್ಸ್ ಅಪ್ಲಿಕೇಷನ್ ಆನ್ ಸಿಲ್ಕ್ ಫ್ಯಾಬ್ರಿಕ್ಸ್ ಸೇರಿದಂತೆ ಪ್ರದರ್ಶನದಲ್ಲಿ 10 ಎಂಜಿನಿಯರಿಂಗ್ ವಿಭಾಗಗಳ 64 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು.



ಕಾಲೇಜಿನಲ್ಲಿ 2020-21 ನೇ ಸಾಲಿನಲ್ಲಿ ದಾಖಲೆಯ 648 ವಿದ್ಯಾರ್ಥಿಗಳು ಕ್ಯಾಂಪಸ್ ಸೆಲೆಕ್ಷನ್ ಆಗಿದೆ. ಗರಿಷ್ಠ ವಾರ್ಷಿಕ 22 ಲಕ್ಷದವರೆಗೂ ವೇತನ ಕೆಲವರಿಗೆ ಲಭಿಸಿದೆ ಎಂದು ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್ ಹೇಳಿದರು.

**648 ವಿದ್ಯಾರ್ಥಿಗಳು ಉದ್ಯೋಗಕ್ಕೆ ಆಯ್ಕೆ**

ಪ್ರದರ್ಶನ ಕಾರ್ಯಕ್ರಮ ಉದ್ಘಾಟನೆಗೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಷ್ಟು ದೊಡ್ಡ ಪ್ರಮಾಣದಲ್ಲಿ ಉದ್ಯೋಗಕ್ಕೆ ಆಯ್ಕೆ ಆಗಿರುವುದು ಸಂತಸ ತಂದಿದೆ. 22 ಲಕ್ಷದವರೆಗೂ ಗರಿಷ್ಠ ವೇತನಕ್ಕೆ ಹಲವು ಮಂದಿ ಆಯ್ಕೆಯಾಗಿರುವುದು ವಿದ್ಯಾರ್ಥಿಗಳ ಸಾಧನೆ ಮತ್ತು ಸಂಸ್ಥೆಯ ನೆರವು ಕಾರಣವಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳಲ್ಲಿ ವಾರ್ಷಿಕ 9 ರಿಂದ 16 ಲಕ್ಷ ವೇತನದವರು ಹೆಚ್ಚಿನ ಜನರಿದ್ದಾರೆ. ಉಳಿದಂತೆ 4.5 ಲಕ್ಷದಿಂದ 6 ಲಕ್ಷದವರೆಗೂ ವೇತನ ಪಡೆಯುವವರು ಇದ್ದಾರೆ.

ಇಂದು ಆಯೋಜನೆಗೊಂಡಿರುವ ಇನ್ ಹೌಸ್ ಪ್ರಾಜೆಕ್ಟ್ ಎಕ್ಸ್‌ಬೀಷನ್‌ನಲ್ಲಿ 64 ಪ್ರಾಜೆಕ್ಟ್‌ಗಳಿವೆ. ವಿಟಿಯು, ಕೆಎಸ್‌ಸಿಎಸ್‌ಟಿ, ಎಐಸಿಟಿಇ, ಇನ್‌ಸ್ಟಿಟ್ಯೂಟ್, ಕೆಎಸ್‌ಟಿಎ, ವಿಜಿಎಸ್‌ಟಿ, ಎನ್‌ಐಎಎನ್ ಇನ್ನಿತರೆ ಸಂಸ್ಥೆಗಳು ಈ ಸಂಶೋಧನೆಗೆ ಧನ ಸಹಾಯ ನೀಡಿವೆ. ಸುಮಾರು 20ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳಿಗೆ ಬಿಐಇಟಿಯಿಂದ 5 ಸಾವಿರ ರೂ. ಆರ್ಥಿಕ ನೆರವು ನೀಡಲಾಗಿದೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಡಿಎಂಜಿ ಮೋರಿ ಸಂಸ್ಥೆಯ ಎಂಡಿ ಸುನಿಲ್‌ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್ ಮತ್ತು ಪ್ರಾಧ್ಯಾಪಕರು ಇದ್ದರು.

ಕಡಿಮೆ ಭೂಮಿ ಮತ್ತು ಹೆಚ್ಚು ಜನಸಂಖ್ಯೆ ಹೊಂದಿರುವ ನಗರ ಪ್ರದೇಶವನ್ನು ಗುರಿಯಾಗಿಸಿಕೊಂಡು ಮಣ್ಣು ರಹಿತ ಕೃಷಿ ಮಾದರಿಯಾದ ಹೈಡ್ರೋಪೋನಿಕ್ಸ್ ಕೃಷಿ ಬಗ್ಗೆಯೂ ವಿದ್ಯಾರ್ಥಿಗಳು ಗಮನ ಹರಿಸಿ ಸಂಶೋಧನೆ ಮಾಡಿದ್ದಾರೆ. ತಾರಸಿ ಕೃಷಿಗೆ ಇದು ಸೂಕ್ತವಾಗಿದೆ, ಇದೊಂದು ಸಂಪೂರ್ಣ ರಾಸಾಯನಿಕಮುಕ್ತ ಸಾವಯವ ಉತ್ಪನ್ನ ಆಗಿರುತ್ತದೆ ಎಂದು ಸಂಶೋಧಕ ವಿದ್ಯಾರ್ಥಿಗಳಾದ ಕೆ.ಪಿ. ಅಶ್ವಿನಿ, ಆರ್.ಎನ್. ಮನು, ಕೆ.ಎಸ್. ನಂದಿನ, ರಕ್ಷಿತ್ ಗೌಡ ಅವರ ಅಂಬೋಣ.

**ಕೃಷಿ ಸಂಶೋಧನೆ:** ರಾಜ್ಯದಲ್ಲಿ ಅತಿ ಹೆಚ್ಚು ಅಡಕೆ ಬೆಳೆಯುವ ನಾಡು ದಾವಣಗೆರೆಯಲ್ಲಿ ಇದರ ಸಿಪ್ಪೆ ವಿಸರ್ಜನೆ ತಲೆನೋವಾಗಿ ರಸ್ತೆ ಬದಿಯಲ್ಲಿ ಸುರಿಯುವ ವ್ಯವಸ್ಥೆಯನ್ನು ಈಗ ಕಾಣುತ್ತೇವೆ. ಪ್ರದರ್ಶನದಲ್ಲಿ ಕಾರ್ತಿಕ್, ಮಂಜುನಾಥ್, ಕಾರ್ತಿಕ್ ರೆಡ್ಡಿ ತಂಡ ಪ್ರದರ್ಶಿಸಿದ ಎಲ್ಲ ಒಣಗಿದ ಕೃಷಿ ತ್ಯಾಜ್ಯಗಳನ್ನು ಪೌಡರ್‌ನಂತೆ ಸಣ್ಣಗೆ ತುಂಡರಿಸಿ, ಶೀಘ್ರ ಸಾವಯವ ಗೊಬ್ಬರವಾಗಿ ಪರಿವರ್ತನೆಗೆ ಅನುಕೂಲ ಆಗುವ ಸಂಶೋಧನೆ ಈ ನೆಲಕ್ಕೆ ಬಹಳಷ್ಟು ಉಪಯೋಗ ಆಗಬಹುದಾಗಿದೆ. ಇನ್ನೂ ಬಹು ಉದ್ದೇಶಿತ ಕೃಷಿ ವಾಹನದ ತಾಂತ್ರಿಕತೆಯೊಂದು ಗಮನ ಸೆಳೆಯಿತು. ಈ ವಾಹನ ಉಳುಮೆ ಮಾಡಿ, ಬೀಜ ಬಿತ್ತನೆ ಜತೆ ನೀರು ಸಿಂಪರಣೆ ಮಾಡುವ ವ್ಯವಸ್ಥೆಯನ್ನು ಹೊಂದಿದೆ.

ಇಂತಹ ಹತ್ತಾರು ಗಮನ ಸೆಳೆಯುವ ಸಂಶೋಧನೆಗಳ ಪ್ರದರ್ಶನವನ್ನು ಪ್ರಾಚಾರ್ಯ ಡಾ.ಅರವಿಂದ್, ಡಿಎಂಜಿ ಮೋರಿ ಎಂಡಿ ಸುನಿಲ್ ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್ ಉದ್ಘಾಟಿಸಿದರು. ಪ್ರಾಧ್ಯಾಪಕರಾದ ಡಾ. ಚಂದ್ರಶೇಖರ್ ಸೇರಿ ಅನೇಕರು ಇದ್ದರು.

Deccan Herald 21-07-2022

# BIET students prepare diaper from areca husk

## Students flaunt their skills during models expo

DAVANGERE, DHNS



BIET Principal H B Aravind, Bengaluru-based DMG Mori Managing Director Sunil Rao, and Vice-President Prashanth Guruprasad view a model designed by students of BIET at the in-house project exhibition-2022 held in Davangere on Wednesday. DH PHOTO

Have you heard of diapers made from arecanut husk fibres? Probably not, as for the first time, such a product has been developed here.

A team of students of the Biotechnology Department of Bapuji Institute of Engineering & Technology (BIET), namely, Raghavendra R B, Manjunath N S, Nuthan A M, Panchakshari Guddad, Basavaraj Rajendra Patil, Ojas M Bhargav, and Darshan S Totad have developed this under the guidance of Manjunath N S and Panchakshari.

This is one among the 64 models designed by final year students of various branches of engineering exhibited at the in-house project exhibition-2022, held in BIET campus here on Wednesday.

Manjunath N S said, areca husk fibres extracted from arecanut have been successfully converted into absorbent sheets, and later made into adult diaper bandages having comparable absorbance capability as commercially available diapers. The sheets produced are eco-friendly and biodegradable, and hence are a sustainable option in future, he said.

Explaining the method, he said, areca fibres were dried for a week and were separated from the shell. It was tested for absorbance. The husk was grounded properly and the chips formed were kept in a muffle furnace for 60 minutes. After various stages including boiling of husk fibres, a pulp was formed. It was then converted into sheets by using vacuum chambers.

The dried areca husk sheets are alternatively placed with cotton pads and super absorbent material (SAM) in the pre-cut sheets, and embossed to seal the material inside, he added.

### Prediction of battery life

Electric vehicles are gaining popularity in today's world and are considered the best substitute for vehicles run by fuel.

However, conditions like aging, and diverse operation conditions degrade the performance of batteries. It often takes months to evaluate the cycle life of a battery.

Therefore, accurate prediction of the cycle life using data from the first few cycles is imperative.

Students of the Mechanical Department Manoj Kumar T, Pranav Kulkarni, Rohan H, and Sagar T A, under the guidance of Dr S Kumarappa, have designed a model that predicts the cycle life of a battery.

They said, supervised Machine Learning (ML) techniques are used to develop data-driven models that can accurately predict the cycle life of lithium ion batteries. This model is built using battery data from the first few cycles. The findings highlight the need for cloud-based artificial intelligence technology tailored to robustly and accurately predict battery malfunctioning in real-world applications.

They said, the condition of the battery is displayed to both customer and service centers. It is very easy to identify the particular malfunctioning in the battery.

### Ointment

Five students of the Biotechnology Department have prepared an ointment using mimosa pudica (touch-me-not) plants to cure wounds, under the guidance of Manasa M B, as the plant leaves have medicinal value.

The leaves were grounded properly and converted into a gel that can be applied to wounds.

These projects were funded by New Age Incubation Networks, Visvesvaraya Technological University, Karnataka State Council for Science & Technology, All-India Council for Technical Education, BIET, Karnataka Science & Technology Academy, and Vision Group on Science & Technology.

BIET Principal H B Aravind, Bengaluru-based DMG Mori Managing Director Sunil Rao, and Vice-President Prashanth Guruprasad viewed the models.

vijayavani 21-07-2022

### ಸಂಶೋಧನಾ ಮಾದರಿಗಳಲ್ಲಿ ಸಮಾಜಮುಖಿ ಚಿಂತನೆ | ಪ್ರಾತ್ಯಕ್ಷಿಕೆ, ಪ್ರದರ್ಶನ ಸಾಕ್ಷಿ

# ಸಮಾಜದಲ್ಲಿ ತಂತ್ರಜ್ಞಾನದ ಬೆಳಕು

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ತಂತ್ರಜ್ಞಾನ ಜನಸಾಮಾನ್ಯರ ಬಾಳಿನಲ್ಲಿ ಹೇಗೆ ಬೆಳಕಾಗಬಲ್ಲದು, ಸಮಾಜಮುಖಿಯಾಗಿ ಬದಲಾವಣೆ ತರಬಲ್ಲದು ಎಂಬುದಕ್ಕೆ ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ ಮಾದರಿಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ ಸಾಕ್ಷಿಯಾಯಿತು.

ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರದರ್ಶನದಲ್ಲಿ ಕಾಲೇಜಿನ 10 ವಿಭಾಗಗಳ ವಿದ್ಯಾರ್ಥಿಗಳು 64 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದರು.

ಎಲೆಕ್ಟ್ರಿಕ್ ವಾಹನಗಳನ್ನು ರಸ್ತೆ ಬದಿಯಲ್ಲಿಯೆ ರಿಚಾರ್ಜ್ ಮಾಡಲು ಸೋಲಾರ್ ಯಂತ್ರ, ಅಡಕೆ ನಾರಿನಿಂದ ಡೈಪರ್‌ಗಳ ತಯಾರಿಕೆ, ತರಕಾರಿಗಳ ತ್ಯಾಜ್ಯದಿಂದ ಗೊಬ್ಬರ ತಯಾರಿಸುವುದು, ಕೊಳಚೆ ನೀರು ಸಂಸ್ಕರಿಸಿ ಕೃಷಿಗೆ ಬಳಸಿಕೊಳ್ಳುವುದು ಹೀಗೆ ಸಮಾಜಕ್ಕೆ ಉಪಯುಕ್ತವಾದ ಸಂಶೋಧನೆಗಳ ಪಕ್ಷಿನೋಟ ಅಲ್ಲಿತ್ತು.

ಮೆಕ್ಯಾನಿಕಲ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಅಮೃತ್, ಎಸ್.ಕೆ. ಮನೋಜ್, ಪಾಟೀಲ್ ಇವರ ತಂಡವು ಚರಂಡಿ ನೀರನ್ನೆ ಸಂಸ್ಕರಿಸಿ ಒಣ ಭೂಮಿಯಲ್ಲಿನ ಬೆಳೆಗೆ ಹಾಯಿಸುವ ಪ್ರಾಜೆಕ್ಟ್ ತಯಾರಿಸಿದ್ದು ಗಮನ ಸೆಳೆಯಿತು.

ಯಾವ ಮಣ್ಣಿಗೆ ಯಾವ ಬೆಳೆ ಸೂಕ್ತ, ಏನು ಗೊಬ್ಬರ ಹಾಕಬೇಕು, ರೋಗ ನಿಯಂತ್ರಣ ಹೇಗೆ ಇದಕ್ಕೆಲ್ಲ ಉತ್ತರವಾಗಿ 'ಕೃಷಿ ಮಿತ್ರ' ಎಂಬ ಆ್ಯಪ್ ಅನ್ನು ವಿದ್ಯಾರ್ಥಿಗಳು ಅಭಿವೃದ್ಧಿ ಪಡಿಸಿದ್ದಾರೆ.

ಆಸ್ಪತ್ರೆಗಳಲ್ಲಿ ರೋಬೋಟ್‌ಗಳನ್ನು ಸೇವೆಗೆ ಉಪಯೋಗಿಸಿಕೊಳ್ಳುವ ಮಾದರಿ ಉಪಯುಕ್ತ ಎನಿಸಿತು. ಅದರಿಂದಲೇ ಆಹಾರ, ಔಷಧ ರವಾನೆ ಮಾಡುವುದು, ಮಾಹಿತಿ ಸಂಗ್ರಹಿಸುವ ಕೆಲಸ ನಡೆಯುತ್ತದೆ ಎಂದು ವಿದ್ಯಾರ್ಥಿಗಳು ವಿವರಿಸಿದರು.

ಘನ ತ್ಯಾಜ್ಯವನ್ನು ಸ್ಮಾರ್ಟ್ ಆಗಿ ವಿಲೇವಾರಿ ಮಾಡುವ ಬಗೆ, ಅರಣ್ಯದಲ್ಲಿ ಕಾಣಿಸಿಕೊಳ್ಳುವ ಬೆಂಕಿಯನ್ನು ಆರಂಭದಲ್ಲೆ ಪತ್ತೆ ಹಚ್ಚಿ ಅದು ವ್ಯಾಪಿಸದಂತೆ ತಡೆಯುವುದು, ಅಡಕೆ ಸಿಪ್ಪೆಯಿಂದ ರೇಯಾನ್ ತಯಾರಿಸುವುದು, ರೈಲಿನ ವೇಗ ನಿಯಂತ್ರಣ, ಹಳಿಗಳ ಮೇಲೆ ಪ್ರಾಣಿಗಳು ಹಾದು ಹೋದರೆ ದೂರದಿಂದಲೇ ಗುರುತಿಸುವುದು, ಹೊಗೆ, ಬೆಂಕಿ ಪತ್ತೆ ಹಚ್ಚುವ ಕಾರ್ಯ ಈ ಮಾದರಿಯ ವಿಶೇಷ.

ಪ್ರದರ್ಶನವನ್ನು ಬೆಂಗಳೂರಿನ ಡಿಎಂಜಿ ಎಮ್‌ಒಆರ್‌ಐನ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ರಾವ್ ಮತ್ತು ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್ ಉದ್ಘಾಟಿಸಿದರು. ಪ್ರಾಂಶುಪಾಲ ಪ್ರೊ. ಎಚ್.ಬಿ.ಅರವಿಂದ್, ಡೀನ್ ಡಾ.ಜಿ.ಪಿ. ದೇಸಾಯಿ ಇದ್ದರು.



ದಾವಣಗೆರೆಯಲ್ಲಿ ಬುಧವಾರ ವಿದ್ಯಾರ್ಥಿಗಳು ತಾವು ತಯಾರಿಸಿದ ಮಾದರಿಗಳ ಬಗ್ಗೆ ಮಾಹಿತಿ ನೀಡಿದರು. ಪ್ರಾಂಶುಪಾಲ ಪ್ರೊ. ಎಚ್.ಬಿ. ಅರವಿಂದ್, ಸುನೀಲ್ ರಾವ್, ಪ್ರಶಾಂತ್ ಗುರುಪ್ರಸಾದ್ ಇದ್ದರು.

## ಅಡಕೆ ನಾರಿನಿಂದ ಡೈಪರ್

ಡೈಪರ್‌ಗಳೆಂದರೆ ರಾಸಾಯನಿಕ ವಸ್ತುಗಳನ್ನು ಹಾಕಿ ಮಾಡಿರುವುದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವುದು ಸಹಜ. ಆದರೆ, ಕಾಲೇಜಿನ ಅಂತಿಮ ವರ್ಷದ ಜೈವಿಕಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಾದ ರಾಘವೇಂದ್ರ, ಓಜಸ್, ನೂತನ್, ಬಸವರಾಜ್ ಎಂಬ ವಿದ್ಯಾರ್ಥಿಗಳು ಅಡಕೆ ನಾರಿನಿಂದ ಡೈಪರ್‌ಗಳನ್ನು ತಯಾರಿಸಿದ್ದು, ಈ ಪ್ರಾಜೆಕ್ಟ್ ಕೆಎಸ್‌ಸಿಎಸ್‌ಟಿಗೂ ಆಯ್ಕೆಯಾಗಿದೆ ಎಂದು ಉಪನ್ಯಾಸಕ ಡಾ.ಎನ್.ಎಸ್.ಮಂಜುನಾಥ್ ತಿಳಿಸಿದರು.

## ತರಕಾರಿ ತ್ಯಾಜ್ಯದಿಂದ ಗೊಬ್ಬರ

ಹಾಸ್ಟೆಲ್‌ಗಳಲ್ಲಿ ತರಕಾರಿ ತ್ಯಾಜ್ಯ ದಿನಕ್ಕೆ ಟನ್‌ಗಟ್ಟಲೆ ಸಂಗ್ರಹವಾಗುತ್ತದೆ. ಅದರಿಂದ ಸಾವಯವ ಗೊಬ್ಬರವನ್ನು ತಯಾರಿಸುವ ಪ್ರಾತ್ಯಕ್ಷಿಕೆಯನ್ನು ಜೈವಿಕ ಶಾಸ್ತ್ರ ವಿಭಾಗದ ಗೌರಿ, ಸಿಂಚನಾ, ಅರ್ಪಿತಾ, ವಿಶ್ವನಾಯ್ಕ್, ಅನ್ವೇಶ್ ಸಂಶೋಧಿಸಿ ಪ್ರದರ್ಶಿಸಿದರು.

## 48 ವಿದ್ಯಾರ್ಥಿಗಳು ಆಯ್ಕೆ

ಕಾಲೇಜಿನಲ್ಲಿ 2020-21 ನೇ ಸಾಲಿನಲ್ಲಿ ದಾಖಲೆಯ 648 ವಿದ್ಯಾರ್ಥಿಗಳು ಕ್ಯಾಂಪಸ್ ಸೆಲೆಕ್ಷನ್ ಆಗಿದ್ದಾರೆ. ವಾರ್ಷಿಕ ಗರಿಷ್ಠ 22 ಲಕ್ಷದವರೆಗೂ ವೇತನ ಕೆಲವರಿಗೆ ಲಭಿಸಿದೆ ಎಂದು ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಹೇಳಿದರು. ಪ್ರದರ್ಶನ ಉದ್ಘಾಟನೆಗೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಷ್ಟು ದೊಡ್ಡ ಪ್ರಮಾಣದಲ್ಲಿ ಉದ್ಯೋಗಕ್ಕೆ ಆಯ್ಕೆ ಆಗಿರುವುದು ಸಂತಸ ತಂದಿದೆ. ಆಯ್ಕೆಯಾದ ವಿದ್ಯಾರ್ಥಿಗಳಲ್ಲಿ ವಾರ್ಷಿಕ 9 ರಿಂದ 16 ಲಕ್ಷ ವೇತನದವರು ಹೆಚ್ಚಿನ ಜನರಿದ್ದಾರೆ. ಉಳಿದಂತೆ 4.5 ಲಕ್ಷ ದಿಂದ 6 ಲಕ್ಷದವರೆಗೂ ವೇತನ ಪಡೆಯುವವರು ಇದ್ದಾರೆ ಎಂದು ತಿಳಿಸಿದರು. ಮಾದರಿಗಳ ಪ್ರದರ್ಶನದಲ್ಲಿ ವಿಟಿಯು, ಕೆಎಸ್‌ಸಿಎಸ್‌ಟಿ, ಎಐಸಿಟಿಇ, ಕೆಎಸ್‌ಟಿಎ, ವಿಜಿಎಸ್‌ಟಿ, ಎನ್‌ಐಎಎನ್ ಇನ್ನಿತರೆ ಸಂಸ್ಥೆಗಳು ಈ ಸಂಶೋಧನೆಗೆ ಧನ ಸಹಾಯ ನೀಡಿವೆ. 20ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳಿಗೆ ಬಿಐಇಟಿಯಿಂದ 5 ಸಾವಿರ ರೂ. ಆರ್ಥಿಕ ನೆರವು ನೀಡಲಾಗಿದೆ ಎಂದು ಹೇಳಿದರು.

ಾದಕರು: ಡಾ|| ಸಿ.ಕೆ.ಜಯಂತ್ ಸಹ ಸಂಪಾದಕರು: ಬಿ.ಎಸ್.ಮಲ್ಲೇಶ್

/73 KA/SK/CTL -783/2020-22 ಗುರುವಾರ, ಜುಲೈ 21, 2022 ದೂರವಾಣಿ: 08192-254186 ಬೆಲೆ: 3.00 ರೂ. ಪುಟಗಳು-4

Nagaravani 21-07-2022

## ಬಿಐಇಟಿ ವಿದ್ಯಾರ್ಥಿಗಳ ಸಾಧನೆಗೆ ಪ್ರಶಂಸೆ!

# ಅಡಿಕೆ ಸಿಪ್ಪೆಯಲ್ಲಿ ಪ್ಯಾಡ್, ಕಪ್ಪೆ ಚಿಪ್ಪಲ್ಲಿ ಪ್ಲೈವುಡ್ ಎಟಿಎಂ ಪಡಿತರ ಯಂತ್ರ ಇತ್ಯಾದಿ ಸಂಶೋಧನೆ





ದಾ.ನಗರವಾಣಿ ಸುದ್ದಿ

ದಾವಣಗೆರೆ.ಜು.20;ಅಡಿಕೆಂ ಉಪಯೋಗದ ಬಗ್ಗೆ ಎಲ್ಲರಿಗೂ ತಿಳಿದೇ ಇದೆ. ಆದರೆ ಹಸಿ ಅಡಕೆಯ ಸಿಪ್ಪೆಯ ಉಪಯೋಗ ಬಹುತೇಕರಿಗೆ ಗೊತ್ತಿಲ್ಲ. ಹಾಗಾಗಿ ಈ ಸಿಪ್ಪೆ ರಸ್ತೆ ಬದಿಯಲ್ಲೊ, ತಿಪ್ಪೆಗುಂಡಿಯಲ್ಲೋ ಕಾಲಕಸವಾಗಿ, ಒಲೆಗೆ ಉರುವಲಾಗಿ ಬಳಕೆ-ಯಾಗುತ್ತಿದೆ.

ಆದರೆ ಅದೇ ಅಡಿಕೆ ಸಿಪ್ಪೆಯ ಕಸ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಕೈಯಲ್ಲಿ ರಸವಾಗಿ ರೂಪುಗೊಂಡಿದೆ. ನಗರದ ಬಿಐಇಟಿ ಕಾಲೇಜಿನ ಆವರಣದಲ್ಲಿ ಹಮ್ಮಿಕೊಂಡಿರುವ ಮಾದರಿಗಳ ಪ್ರದರ್ಶನದಲ್ಲಿ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಬಯೋಕೆಮಿಸ್ಟ್ರಿ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳ ತಂಡ ಅಡಕೆ ಸಿಪ್ಪೆಯಿಂದ ಡೈಪರ್ ಪ್ಯಾಡ್ ತಯಾರಿಸಿ ಗಮನ ಸೆಳೆದಿದೆ. ಈ ವಿದ್ಯಾರ್ಥಿಗಳ ಈ ಸಂಶೋಧನೆ ರಾಜ್ಯಮಟ್ಟಕ್ಕೂ ಆಯ್ಕೆಯಾಗಿರುವುದು ಕಾಲೇಜಿಗೆ ಗರಿ ಮೂಡಿಸಿದೆ.

ಅಚ್ಚರಿಯಾದರೂ ನಂಬಲೇಬೇಕು. ಅಡಿಕೆ ಸಿಪ್ಪೆಯಿಂದ ಡೈಪರ್ ತಯಾರಿಸಿದ್ದಾರೆ. ಅಡಿಕೆ ಸಿಪ್ಪೆಯನ್ನು ಸಂಗ್ರಹಿಸಿ ಬೇಯಿಸಿ ಪುಡಿ ಮಾಡಿ ಅದನ್ನು ರಟ್ಟಿನ ರೂಪಕ್ಕೆ ತಂದು ಬ್ಲೀಚಿಂಗ್ ಮಾಡಲಾಗುತ್ತದೆ. ಮೊದಲು ದ್ರವ ಪದಾರ್ಥವನ್ನು ಹೀರಿಕೊಳ್ಳಲು ಹತ್ತಿಯನ್ನು ಲೇಯರ್, ನಂತರ ಸಿಪ್ಪೆಯಿಂದ ತಯಾರಿಸಿದ ಲೇಯರ್ ಅಳವಡಿಸಲಾಗುತ್ತದೆ. ಇದು ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಇದರ ತಯಾರಿಕೆಗೆ ಬಳಸಿರುವ ಪ್ಲಾಸ್ಟಿಕ್ ಕೂಡ ಪರಿಸರ ಸ್ನೇಹಿಯಾಗಿರುವುದು ವಿಶೇಷ ಎನ್ನುತ್ತಾರೆ ರಾಘವೇಂದ್ರ.

ಈಗಾಗಲೇ ಪೇಟೆಂಟ್ ಪಡೆಯಲು ತಯಾರಿ ನಡೆಸಲಾಗಿದೆ. ಡೈಪರ್ ಅಭಿವೃದ್ಧಿ ಕೆಲಸ ಇನ್ನು ಸ್ವಲ್ಪ ಬಾಕಿ ಇರುವುದರಿಂದ ನಂತರ ಪೇಟೆಂಟ್ ಪಡೆದು ಮಾರುಕಟ್ಟೆಗೆ ಬಿಡುಗಡೆ ಸಂಬಂಧ ತೀರ್ಮಾನ ಮಾಡಲಾಗುವುದು ಎಂದರು. ಈ ತಂಡದಲ್ಲಿ ನೂತನ್, ಓಜಸ್ ಮತ್ತು ಬಸವರಾಜ್ ಇದ್ದರು.

(2ನೇ ಪುಟಕ್ಕೆ)

# ಬಿಐಇಟಿ ವಿದ್ಯಾರ್ಥಿಗಳ ಸಾಧನೆಗೆ ಪ್ರಶಂಸೆ!



(1ನೇ ಪುಟದಿಂದ)

ಇದೇ ರೀತಿಯಲ್ಲಿ ಅನೇಕ ವಿದ್ಯಾರ್ಥಿಗಳು ಹೊಸ ಹೊಸ ಸಂಶೋಧನೆಗಳನ್ನು ಮಾಡುವ ಮೂಲಕ ವಿಜ್ಞಾನ ಆಸಕ್ತರ ಗಮನ ಸೆಳೆದರು. ಪ್ರಾಧ್ಯಾಪಕ ಡಾ.ಎ.ಎಸ್.ಶರಣ್ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ ಶರವಣ, ಅಭಿಷೇಕ, ಸುನೀಲ್, ಹರೀಶ್ ಗೌಡ ನೇತೃತ್ವದ ತಂಡ ಬಿಸಿಗಾಳಿಯಿಂದ ಸೊಳ್ಳೆಗಳನ್ನು ಓಡಿಸುವ ಸಂಶೋಧನೆ ಕಂಡುಹಿಡಿದಿದ್ದಾರೆ.

ಸುಮಾರು 2500 ರೂ. ಮೌಲ್ಯದ ನೂತನ ಮಾದರಿಯ ಈ ಯಂತ್ರ ಐದು ವರ್ಷ ಬಾಳಿಕೆ ಬರಲಿದ್ದು, ಮನೆಯ ರೂಂಗಳಲ್ಲಿ ಈ ಯಂತ್ರ ಉಪಯೋಗಿಸಿ 50 ಡಿಗ್ರಿ ಸೆಂಟಿಗ್ರೇಡ್ ಬಿಸಿಗಾಳಿ ಬಿಟ್ಟರೆ ಮನೆಯಲ್ಲಿ ಸೊಳ್ಳೆಗಳ ರಕ್ಕೆಗಳು ಸ್ವಾಧೀನ ಕಳೆದುಕೊಂಡು ನೆಲಕ್ಕೆ ಬಿದ್ದು ಸಾಯುತ್ತವೆ. ಈ ಯಂತ್ರ ಬಳಸಿದರೆ ದಿನಕ್ಕೆ ಕೇವಲ 3 ರೂ. ವಿದ್ಯುತ್ ಖರ್ಚಾಗಲಿದೆ ಎನ್ನುತ್ತಾರೆ ವಿದ್ಯಾರ್ಥಿಗಳು.

ಇದೇ ರೀತಿ ಸೆಣಬು ಮತ್ತು ಗೋಣಿಚೀಲದಂತಹ ಕಚ್ಚಾ ವಸ್ತುಗಳಿಂದ ಪೀಠೋಪಕರಣಗಳು, ಕಾರಿನ ಡ್ಯಾಶ್ ಬೋರ್ಡ್ ತಯಾರಿಕೆ, ಕಪ್ಪೆ ಚಿಪ್ಪು, ಬಂಬು ಬಳಸಿ ಪ್ಲೈವುಡ್ ಗೆ ಪರ್ಯಾಯವಾಗಿ ಕಾಂಪೋಸಿಟ್ ಮೆಟೀರಿಯಲ್ ನ್ನು ವಿದ್ಯಾರ್ಥಿಗಳು ತಯಾರಿಸಿ ಅಚ್ಚರಿ ಮೂಡಿಸಿದರು. ಎಲೆಕ್ಟ್ರಾನಿಕ್ ವಿದ್ಯಾರ್ಥಿಗಳು ಎಟಿಎಂ ಯಂತ್ರಗಳ ರೀತಿ ಪಡಿತರ ಎಟಿಎಂ ಯಂತ್ರ ರೂಪಿಸಿ ಗಮನ ಸೆಳೆದರು. ಇದರಲ್ಲಿ ಸಮಯ ಉಳಿತಾಯ, ಅವ್ಯವಹಾರ ಇಲ್ಲ, ಕಡಿಮೆ ಸಿಬ್ಬಂದಿ ಎಂಬುದು ವಿಶೇಷ.

ಹೆದ್ದಾರಿಗಳಲ್ಲಿ ಬೀದಿ ದೀಪ ಆಟೋಮ್ಯಾಟಿಕ್ ನಿರ್ವಹಣೆ ಇನ್ನೊಂದು ವಿದ್ಯಾರ್ಥಿ ತಂಡದ ಸಂಶೋಧನೆ. ಅಪಘಾತ ಆದರೆ ಕಂಬಗಳಲ್ಲಿ ಅಳವಡಿಸಲಾದ ಸ್ವಿಚ್ ಒತ್ತಿದರೆ ಅದು ನೇರ ಆಸ್ಪತ್ರೆ ಮತ್ತು ಪೊಲೀಸ್ ಠಾಣೆಗೆ ಮಾಹಿತಿ ರವಾನಿಸುತ್ತದೆ.

ಕಬ್ಬಿನ ಸಿಪ್ಪೆ ಸುಟ್ಟ ಬೂದಿ, ಹಾರು ಬೂದಿ ಇವುಗಳಿಗೆ ಕೆಮಿಕಲ್ ಮಿಶ್ರಣ ಮಾಡಿ ಸಿಮೆಂಟ್ ಗೆ ಪರ್ಯಾಯ ಒಂದನ್ನು ವಿದ್ಯಾರ್ಥಿಗಳು ಕಂಡು ಹಿಡಿದಿದ್ದಾರೆ. ಹೀಗೆ ಜನೋಪಯೋಗಿ ಸಂಶೋಧನೆಗಳಲ್ಲಿ ಬಿಐಇಟಿ ವಿದ್ಯಾರ್ಥಿಗಳು ಮುಂಚೂಣಿಯಲ್ಲಿದ್ದು ಅತಿಥಿಗಳಾಗಿ ಆಗಮಿಸಿದ್ದ ಡಿಎಂಜಿ ಮೋರೆ ಕಂಪನಿ ಎಂಡಿ ಸುನೀಲ್ ರಾವ್, ಪ್ರಶಾಂತ್ ಹಾಗೂ ಪ್ರಾಂಶುಪಾಲರಾದ ಡಾ. ಹೆಚ್.ಬಿ.ಅರವಿಂದ್ ಮೆಚ್ಚುಗೆ ವ್ಯಕ್ತಪಡಿಸಿದರು.

ಮೆಕ್ಯಾನಿಕಲ್ ಇಂಜಿನಿಯರಿಂಗ್ ಅಂತಿಮ ವರ್ಷದ ವಿದ್ಯಾರ್ಥಿಗಳು, 10 ಸಾವಿರ ಮೌಲ್ಯದ ಸಾವಯವ ಗೊಬ್ಬರ ತಯಾರಿಸುವ ನೂತನ ಮಾದರಿ ಯಂತ್ರ ಗಮನ ಸೆಳೆಯಿತು. ರೈತರು ಈ ಯಂತ್ರ ಖರೀದಿಸಿ ತಾವೇ ಸಾವಯವ ಗೊಬ್ಬರ ತಯಾರಿಸಬಹುದು ಎಂದು ಸಂಶೋಧನೆ ವಿದ್ಯಾರ್ಥಿಗಳಾದ ಕಾರ್ತಿಕ್, ಮಂಜುನಾಥ್, ಲಿಖಿನ್ ಗೌಡ, ಕಾರ್ತಿಕ್ ರೆಡ್ಡಿ ತಿಳಿಸಿದರು.

ಇನ್ನು ಸಿವಿಲ್,ಟೈಕ್ಸ್ ಟೈಲ್, ಎಲೆಕ್ಟ್ರಾನಿಕ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಿಕಲ್, ಕೆಮಿಕಲ್, ಇನ್ಫಾರ್ಮೇಶನ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳ ಹೊಸ ಆವಿಷ್ಕಾರಗಳು ಗಮನ ಸೆಳೆದವು.

Vijayakarnataka 21-07-2022

## ಸಂಶೋಧನಾ ಮಾದರಿಗಳಲ್ಲಿ ಸಮಾಜಮುಖಿ ಚಿಂತನೆ | ಪ್ರಾತ್ಯಕ್ಷಿಕೆ, ಪ್ರದರ್ಶನ ಸಾಕ್ಷಿ

# ಸಮಾಜದಲ್ಲಿ ತಂತ್ರಜ್ಞಾನದ ಬೆಳಕು

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ತಂತ್ರಜ್ಞಾನ ಜನಸಾಮಾನ್ಯರ ಬಾಳಿನಲ್ಲಿ ಹೇಗೆ ಬೆಳಕಾಗಬಲ್ಲದು, ಸಮಾಜಮುಖಿಯಾಗಿ ಬದಲಾವಣೆ ತರಬಲ್ಲದು ಎಂಬುದಕ್ಕೆ ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ ಮಾದರಿಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ ಸಾಕ್ಷಿಯಾಯಿತು.

ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರದರ್ಶನದಲ್ಲಿ ಕಾಲೇಜಿನ 10 ವಿಭಾಗಗಳ ವಿದ್ಯಾರ್ಥಿಗಳು 64 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದರು.

ಎಲೆಕ್ಟ್ರಿಕ್ ವಾಹನಗಳನ್ನು ರಸ್ತೆ ಬದಿಯಲ್ಲಿಯೆ ರಿಚಾರ್ಜ್ ಮಾಡಲು ಸೋಲಾರ್ ಯಂತ್ರ, ಅಡಕೆ ನಾರಿನಿಂದ ಡೈಪರ್‌ಗಳ ತಯಾರಿಕೆ, ತರಕಾರಿಗಳ ತ್ಯಾಜ್ಯದಿಂದ ಗೊಬ್ಬರ ತಯಾರಿಸುವುದು, ಕೊಳಚೆ ನೀರು ಸಂಸ್ಕರಿಸಿ ಕೃಷಿಗೆ ಬಳಸಿಕೊಳ್ಳುವುದು ಹೀಗೆ ಸಮಾಜಕ್ಕೆ ಉಪಯುಕ್ತವಾದ ಸಂಶೋಧನೆಗಳ ಪಕ್ಷಿನೋಟ ಅಲ್ಲಿತ್ತು.

ಮೆಕ್ಯಾನಿಕಲ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಅಮೃತ್, ಎಸ್.ಕೆ. ಮನೋಜ್, ಪಾಟೀಲ್ ಇವರ ತಂಡವು ಚರಂಡಿ ನೀರನ್ನೆ ಸಂಸ್ಕರಿಸಿ ಒಣ ಭೂಮಿಯಲ್ಲಿನ ಬೆಳೆಗೆ ಹಾಯಿಸುವ ಪ್ರಾಜೆಕ್ಟ್ ತಯಾರಿಸಿದ್ದು ಗಮನ ಸೆಳೆಯಿತು.

ಯಾವ ಮಣ್ಣಿಗೆ ಯಾವ ಬೆಳೆ ಸೂಕ್ತ, ಏನು ಗೊಬ್ಬರ ಹಾಕಬೇಕು, ರೋಗ ನಿಯಂತ್ರಣ ಹೇಗೆ ಇದಕ್ಕೆಲ್ಲ ಉತ್ತರವಾಗಿ 'ಕೃಷಿ ಮಿತ್ರ' ಎಂಬ ಆ್ಯಪ್ ಅನ್ನು ವಿದ್ಯಾರ್ಥಿಗಳು ಅಭಿವೃದ್ಧಿ ಪಡಿಸಿದ್ದಾರೆ.

ಆಸ್ಪತ್ರೆಗಳಲ್ಲಿ ರೋಬೋಟ್‌ಗಳನ್ನು ಸೇವೆಗೆ ಉಪಯೋಗಿಸಿ ಕೊಳ್ಳುವ ಮಾದರಿ ಉಪಯುಕ್ತ ಎನಿಸಿತು. ಅದರಿಂದಲೇ ಆಹಾರ, ಔಷಧ ರವಾನೆ ಮಾಡುವುದು, ಮಾಹಿತಿ ಸಂಗ್ರಹಿಸುವ ಕೆಲಸ ನಡೆಯುತ್ತದೆ ಎಂದು ವಿದ್ಯಾರ್ಥಿಗಳು ವಿವರಿಸಿದರು.

ಘನ ತ್ಯಾಜ್ಯವನ್ನು ಸ್ಮಾರ್ಟ್ ಆಗಿ ವಿಲೇವಾರಿ ಮಾಡುವ ಬಗೆ, ಅರಣ್ಯದಲ್ಲಿ ಕಾಣಿಸಿಕೊಳ್ಳುವ ಬೆಂಕಿಯನ್ನು ಆರಂಭದಲ್ಲೆ ಪತ್ತೆ ಹಚ್ಚಿ ಅದು ವ್ಯಾಪಿಸದಂತೆ ತಡೆಯುವುದು, ಅಡಕೆ ಸಿಪ್ಪೆಯಿಂದ ರೇಯಾನ್ ತಯಾರಿಸುವುದು, ರೈಲಿನ ವೇಗ ನಿಯಂತ್ರಣ, ಹಳಿಗಳ ಮೇಲೆ ಪ್ರಾಣಿಗಳು ಹಾದು ಹೋದರೆ ದೂರದಿಂದಲೇ ಗುರುತಿಸುವುದು, ಹೊಗೆ, ಬೆಂಕಿ ಪತ್ತೆ ಹಚ್ಚುವ ಕಾರ್ಯ ಈ ಮಾದರಿಯ ವಿಶೇಷ.

ಪ್ರದರ್ಶನವನ್ನು ಬೆಂಗಳೂರಿನ ಡಿಎಂಜಿ ಎಮ್‌ಒಆರ್‌ಐನ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ರಾವ್ ಮತ್ತು ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್ ಉದ್ಘಾಟಿಸಿದರು. ಪ್ರಾಂಶುಪಾಲ ಪ್ರೊ. ಎಚ್.ಬಿ.ಅರವಿಂದ್, ಡೀನ್ ಡಾ.ಜಿ.ಪಿ. ದೇಸಾಯಿ ಇದ್ದರು.



ದಾವಣಗೆರೆಯಲ್ಲಿ ಬುಧವಾರ ವಿದ್ಯಾರ್ಥಿಗಳು ತಾವು ತಯಾರಿಸಿದ ಮಾದರಿಗಳ ಬಗ್ಗೆ ಮಾಹಿತಿ ನೀಡಿದರು. ಪ್ರಾಂಶುಪಾಲ ಪ್ರೊ. ಎಚ್.ಬಿ. ಅರವಿಂದ್, ಸುನೀಲ್ ರಾವ್, ಪ್ರಶಾಂತ್ ಗುರುಪ್ರಸಾದ್ ಇದ್ದರು.

### ಅಡಕೆ ನಾರಿನಿಂದ ಡೈಪರ್

ಡೈಪರ್‌ಗಳೆಂದರೆ ರಾಸಾಯನಿಕ ವಸ್ತುಗಳನ್ನು ಹಾಕಿ ಮಾಡಿರುವುದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವುದು ಸಹಜ. ಆದರೆ, ಕಾಲೇಜಿನ ಅಂತಿಮ ವರ್ಷದ ಜೈವಿಕಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಾದ ರಾಘವೇಂದ್ರ, ಓಜಸ್, ನೂತನ್, ಬಸವರಾಜ್ ಎಂಬ ವಿದ್ಯಾರ್ಥಿಗಳು ಅಡಕೆ ನಾರಿನಿಂದ ಡೈಪರ್‌ಗಳನ್ನು ತಯಾರಿಸಿದ್ದು, ಈ ಪ್ರಾಜೆಕ್ಟ್ ಕೆಎಸ್‌ಸಿಎಸ್‌ಟಿಗೂ ಆಯ್ಕೆಯಾಗಿದೆ ಎಂದು ಉಪನ್ಯಾಸಕ ಡಾ.ಎನ್.ಎಸ್.ಮಂಜುನಾಥ್ ತಿಳಿಸಿದರು.

### ತರಕಾರಿ ತ್ಯಾಜ್ಯದಿಂದ ಗೊಬ್ಬರ

ಹಾಸ್ಟೆಲ್‌ಗಳಲ್ಲಿ ತರಕಾರಿ ತ್ಯಾಜ್ಯ ದಿನಕ್ಕೆ ಟನ್‌ಗಟ್ಟಲೆ ಸಂಗ್ರಹವಾಗುತ್ತದೆ. ಅದರಿಂದ ಸಾವಯವ ಗೊಬ್ಬರವನ್ನು ತಯಾರಿಸುವ ಪ್ರಾತ್ಯಕ್ಷಿಕೆಯನ್ನು ಜೈವಿಕ ಶಾಸ್ತ್ರ ವಿಭಾಗದ ಗೌರಿ, ಸಿಂಚನಾ, ಅರ್ಪಿತಾ, ವಿಶ್ವನಾಯ್ಕ್, ಅನ್ವೇಶ್ ಸಂಶೋಧಿಸಿ ಪ್ರದರ್ಶಿಸಿದರು.

### 48 ವಿದ್ಯಾರ್ಥಿಗಳು ಆಯ್ಕೆ

ಕಾಲೇಜಿನಲ್ಲಿ 2020-21 ನೇ ಸಾಲಿನಲ್ಲಿ ದಾಖಲೆಯ 648 ವಿದ್ಯಾರ್ಥಿಗಳು ಕ್ಯಾಂಪಸ್ ಸೆಲೆಕ್ಷನ್ ಆಗಿದ್ದಾರೆ. ವಾರ್ಷಿಕ ಗರಿಷ್ಠ 22 ಲಕ್ಷದವರೆಗೂ ವೇತನ ಕೆಲವರಿಗೆ ಲಭಿಸಿದೆ ಎಂದು ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಹೇಳಿದರು. ಪ್ರದರ್ಶನ ಉದ್ಘಾಟನೆಗೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಷ್ಟು ದೊಡ್ಡ ಪ್ರಮಾಣದಲ್ಲಿ ಉದ್ಯೋಗಕ್ಕೆ ಆಯ್ಕೆ ಆಗಿರುವುದು ಸಂತಸ ತಂದಿದೆ. ಆಯ್ಕೆಯಾದ ವಿದ್ಯಾರ್ಥಿಗಳಲ್ಲಿ ವಾರ್ಷಿಕ 9 ರಿಂದ 16 ಲಕ್ಷ ವೇತನದವರು ಹೆಚ್ಚಿನ ಜನರಿದ್ದಾರೆ. ಉಳಿದಂತೆ 4.5 ಲಕ್ಷ ದಿಂದ 6 ಲಕ್ಷದವರೆಗೂ ವೇತನ ಪಡೆಯುವವರು ಇದ್ದಾರೆ ಎಂದು ತಿಳಿಸಿದರು. ಮಾದರಿಗಳ ಪ್ರದರ್ಶನದಲ್ಲಿ ವಿಟಿಯು, ಕೆಎಸ್‌ಸಿಎಸ್‌ಟಿ, ಎಐಸಿಟಿಇ, ಕೆಎಸ್‌ಟಿಎ, ವಿಜಿಎಸ್‌ಟಿ, ಎನ್‌ಐಎಎನ್ ಇನ್ನಿತರೆ ಸಂಸ್ಥೆಗಳು ಈ ಸಂಶೋಧನೆಗೆ ಧನ ಸಹಾಯ ನೀಡಿವೆ. 20ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳಿಗೆ ಬಿಐಇಟಿಯಿಂದ 5 ಸಾವಿರ ರೂ. ಆರ್ಥಿಕ ನೆರವು ನೀಡಲಾಗಿದೆ ಎಂದು ಹೇಳಿದರು.

# ಬಿಐಇಟಿಯಲ್ಲಿ ಜನೋಪಯೋಗಿ ಸಂಶೋಧನೆಗಳ ಅನಾವರಣ









ದಾವಣಗೆರೆ, ಜು. 21- ಸೊಳ್ಳೆ ಓಡಿಸುವ ಲಿಕ್ವಿಡ್ ರಹಿತ ಸ್ಪ್ರೇ ಯಂತ್ರ, ರಸ್ತೆ ಬದಿ ಎಲೆಕ್ಟ್ರಿಕ್ ವಾಹನ ರಿಚಾರ್ಜ್, ನೆಲ ಹಾಗೂ ಆಕಾಶದಲ್ಲಿ ಸ್ವಚ್ಛಗೊಳಿಸುವ ಡ್ರೋಣ್, ವಯರ್‌ಲೆಸ್ ಎಲೆಕ್ಟ್ರಾನಿಕ್ ಸೂಚನಾ ಫಲಕ, ಅಡಿಕೆ ಸಿಪ್ಪೆಯಿಂದ ಡೈಪರ್ ಹೀಗೆ ಸಮಾಜ ಮುಖಿ ಪ್ರಾತ್ಯಕ್ಷಿಕೆಗಳನ್ನು ನಗರದ ಬಿಐಇಟಿ ಕಾಲೇಜು ವಿದ್ಯಾರ್ಥಿಗಳು ಸಿದ್ಧಪಡಿಸಿ, ಪ್ರದರ್ಶಿಸಿದರು.

ಬಿಐಇಟಿ ಕಾಲೇಜು ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಬುಧವಾರ ಕಾಲೇಜು ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಇನ್ ಹೌಸ್ ಪ್ರಾಜೆಕ್ಟ್ ಎಕ್ಸಿಬಿಷನ್-2022ರಲ್ಲಿ ಸುಮಾರು 64 ರೀತಿಯ ಸಂಶೋಧನಾ ಪ್ರಾತ್ಯಕ್ಷಿಕೆಗಳು ಪ್ರದರ್ಶನಗೊಂಡವು.

ಕೃಷಿ ಭಾರತದ ಆರ್ಥಿಕತೆಯ ಬೆನ್ನೆಲುಬು. ಚಿಕ್ಕ ಜಮೀನು ಹೊಂದಿದ ರೈತರು ದುಬಾರಿ ಉಪಕರಣಗಳನ್ನು ಬಳಸುವುದು ಕಷ್ಟ. ಈ ಹಿನ್ನೆಲೆಯಲ್ಲಿ ಇಲ್ಲಿನ ವಿದ್ಯಾರ್ಥಿಗಳಾದ ವಿಷ್ಣು, ಸ್ನೇಹ, ಸೊನಾಲಿ ಅವರ ಬಹು ಉದ್ದೇಶಿತ ಕೃಷಿ ವಾಹನದ ಪ್ರಾತ್ಯಕ್ಷಿಕೆ ಗಮನ ಸೆಳೆಯಿತು.

ಸ್ಮಾರ್ಟ್ ಕಾರ್ಡ್ ಬಳಕೆ ಮಾಡುವ ಮೂಲಕ ಪಡಿತರ ವಿತರಣೆ ಮಾಡಬಹುದೆಂದು ವಿದ್ಯಾರ್ಥಿಗಳು ತೋರಿಸಿಕೊಟ್ಟರು. ಕಾರ್ಡ್ ಮೂಲಕ ಸರ್ಕಾರ ನಿಗದಿ ಮಾಡಿದ ಪಡಿತರವು ಎಟಿಎಂನಲ್ಲಿ ಹಣ ಪಡೆಯುವ ಮಾದರಿಯಲ್ಲಿ ಪಡೆಯಬಹುದಾಗಿದೆ ಎಂದು ವಿದ್ಯಾರ್ಥಿಗಳು ತಿಳಿಸಿದರು.

ಸಾಮಾನ್ಯವಾಗಿ ರಾಸಾಯನಿಕಗಳನ್ನು ಬಳಸಿ ಡೈಪರ್‌ಗಳನ್ನು ತಯಾರಿಸುತ್ತಾರೆ. ಆದರೆ ಇಲ್ಲಿನ ವಿದ್ಯಾರ್ಥಿಗಳು ಅಡಿಕೆ ನಾರಿನಿಂದ ಡೈಪರ್ ತಯಾರಿಸಬಹುದೆಂದು ಸಂಶೋಧನೆ ಮೂಲಕ ತೋರಿಸಿಕೊಟ್ಟಿದ್ದಾರೆ. ಇದರಿಂದ ಆರೋಗ್ಯದ ಮೇಲೆ ಆಗುವ ವ್ಯತಿರಿಕ್ತ ಪರಿಣಾಮ ತಪ್ಪಿಸಬಹುದೆಂಬುದು ವಿದ್ಯಾರ್ಥಿಗಳ ನಿಲುವು.

ತರಕಾರಿ ತ್ಯಾಜ್ಯವನ್ನು ಬಳಸಿ ಸಾವಯವ ಗೊಬ್ಬರ ತಯಾರಿಸುವ ಪ್ರಾತ್ಯಕ್ಷಿಕೆಯನ್ನು ಜೈವಿಕ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಸಂಶೋಧಿಸಿ, ಪ್ರದರ್ಶಿಸಿದರು.



## ಹೌಸ್ ಪ್ರಾಜೆಕ್ಟ್ ಎಕ್ಸಿಬಿಷನ್-2022

ಜಲಾಶಯಗಳ ಒಳಭಾಗದಲ್ಲಿ ತಡೆಗೋಡೆಗೆ ಆಗಬಹುದಾದ ಹಾನಿ ಹಾಗೂ ಅಲ್ಲಿನ ಚಿತ್ರಣ ಸೆರೆ ಹಿಡಿಯುವ ರಿಮೋಟ್ ಕಂಟ್ರೋಲ್ ಸಬ್ ಮರ್ಸಿಬಲ್ ಪ್ರಾತ್ಯಕ್ಷಿಕೆಯನ್ನು ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಇತ್ತೀಚಿನ ದಿನಗಳಲ್ಲಿ ಜನತೆ ಎಲೆಕ್ಟ್ರಿಕಲ್ ವಾಹನಗಳನ್ನು ಬಳಸಲು ಹೆಚ್ಚು ಆಸಕ್ತಿ ತೋರುತ್ತಿದ್ದು, ಈ ಹಿನ್ನೆಲೆಯಲ್ಲಿ ರಸ್ತೆ ಬದಿಗಳಲ್ಲಿ ಚಾರ್ಜಿಂಗ್ ಪಾಯಿಂಟ್‌ಗಳ ಅಗತ್ಯತೆಯ ಪ್ರಾತ್ಯಕ್ಷಿಕೆಯನ್ನು ಎಲೆಕ್ಟ್ರಾನಿಕ್ ವಿದ್ಯಾರ್ಥಿಗಳು ಪ್ರದರ್ಶಿಸಿದರು. ಪೆಟ್ರೋಲ್-ಡೀಸೆಲ್ ಬೆಲೆ ಗಗನಕ್ಕೇರುತ್ತಿದ್ದು, ಪ್ರಸ್ತುತ ದಿನಗಳಲ್ಲಿ ಎಲೆಕ್ಟ್ರಿಕ್ ವಾಹನ ಹಾಗೂ ಚಾರ್ಜಿಂಗ್ ಪಾಯಿಂಟ್‌ಗಳ ಅಗತ್ಯತೆ ಹೆಚ್ಚಾಗುತ್ತಿದೆ ಎಂದು ವಿದ್ಯಾರ್ಥಿಗಳು ವಿವರಿಸಿದರು.

ಮಣ್ಣು ರಹಿತ ಕೃಷಿ ಮಾದರಿಯಾದ ಹೈಡ್ರೋಪೋನಿಕ್ಸ್ ಕೃಷಿ ಬಗ್ಗೆಯೂ ವಿದ್ಯಾರ್ಥಿಗಳು ಗಮನ ಹರಿಸಿದ್ದರು. ಕೃಷಿಗೆ ಇದು ಸೂಕ್ತವಾಗಿದ್ದು, ಪೂರ್ಣ ರಾಸಾಯನಿಕ ಮುಕ್ತ ಸಾವಯವ ಉತ್ಪನ್ನವಾಗಿದೆ ಎಂದು ವಿದ್ಯಾರ್ಥಿಗಳು ತಿಳಿಸಿದರು.

ಅಡಿಕೆ ಬೆಳೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅಡಿಕೆ ಸಿಪ್ಪೆ ಸೇರಿದಂತೆ ಕೃಷಿ ಒಣ ತ್ಯಾಜ್ಯವನ್ನು 1 ಮಿ.ಮೀ. ವರೆಗೂ ತುಂಡರಿಸಿ, ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸುವ ಯಂತ್ರವನ್ನು ಸಂಶೋಧಿಸಿದ್ದರು.

ಇನ್ನು ಕೃಷಿ ಮಿತ್ರ ಎಂಬ ಆಪ್ ಸಿದ್ಧಪಡಿಸಿದ್ದ ವಿದ್ಯಾರ್ಥಿಗಳು, ಯಾವ ಮಣ್ಣಿಗೆ ಯಾವ ಬೆಳೆ ಸೂಕ್ತ, ಯಾವ ಗೊಬ್ಬರ ಹಾಕಬೇಕು. ರೋಗ ನಿಯಂತ್ರಣ ಹೇಗೆ ಎಂಬುದಕ್ಕೆ ಉತ್ತರ ಕಂಡುಕೊಳ್ಳಬಹುದಾಗಿದೆ ಎಂದು ಹೇಳಿದರು.

ಐಸಿಯು ವಾರ್ಡ್‌ಗಳಲ್ಲಿ ಸೇವೆಗೆ ರೋಬೋಟ್‌ಗಳನ್ನೂ ಉಪಯೋಗಿಸಿಕೊಳ್ಳ ಬಹುದು. ಆಹಾರ, ಔಷಧ ರವಾನಿ ಮಾಡುವುದು ಹಾಗೂ ಮಾಹಿತಿ ಸಂಗ್ರಹಿಸುವ ಕೆಲಸವನ್ನು ರೋಬೋಟ್ ಮೂಲಕವೇ ಮಾಡಬಹುದು ಎಂದು ರೋಬೋಟ್ ಮಾದರಿ ಪ್ರಾತ್ಯಕ್ಷಿಕೆಯ ವಿದ್ಯಾರ್ಥಿಗಳು ಹೇಳಿದರು.

ಉಳಿದಂತೆ, ಶೇ.30ರಷ್ಟು ಹಾರು ಬೂದಿಯನ್ನು ಬಳಸಿ ಸಿಮೆಂಟ್ ತಯಾರಿಸುವುದು, ನೀರು ಇಂಗುವ ರೀತಿಯಲ್ಲಿ ಪಾರ್ಕ್‌ಗಳಲ್ಲಿ ಪಾದಚಾರಿ ಪಥಗಳನ್ನು ನಿರ್ಮಿಸುವುದು, ಸೆಣಬಿನಿಂದ ವಿವಿಧ ವಸ್ತುಗಳನ್ನು ತಯಾರಿಸುವುದು, ತ್ಯಾಜ್ಯವನ್ನು ಆಟೋಮ್ಯಾಟಿಕ್ ಆಗಿ ವಿಂಗಡಿಸುವ ಯಂತ್ರ, ಮುಟ್ಟಿದರೆ ಮುನಿ ಸಸ್ಯದ ಎಲೆಯಿಂದ ಚರ್ಮರೋಗ ನಿವಾರಣೆಯ ಔಷಧ, ಸ್ಮಾರ್ಟ್ ಹಸಿರು ಮನೆಯನ್ನು ಮೊಬೈಲ್ ಮೂಲಕ ನಿಯಂತ್ರಿಸುವುದು, ಹೃದಯ ಸಂಬಂಧಿ ಕಾಯಿಲೆ, ಕ್ಯಾನ್ಸರ್ ಸಹಿತ ವಿವಿಧ ರೋಗಗಳನ್ನು ಕಂಡು ಹಿಡಿಯುವುದು ಮುಂತಾದವುಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಬಿಐಇಟಿ ಪ್ರಾಂಶುಪಾಲ ಡಾ. ಅರವಿಂದ್, 'ಡಿಎಂಜಿ ಮೋರಿ'ಯ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ರಾವ್, ಉಪಾಧ್ಯಕ್ಷ ಪ್ರಶಾಂತ್ ಗುರುಪ್ರಸಾದ್, ಪಿಆರ್‌ಓ ದೇಸಾಯಿ ಇತರರು ಪ್ರಾತ್ಯಕ್ಷಿಕೆ ವೀಕ್ಷಿಸಿದರು.